# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಜೂನ್ 07, 2022

ಸಂಪುಟ : 49 ಸಂಚಿಕೆ : 24 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ಸಂಚಾರ ಕಿರಿಕಿರಿ** ದಾವಣಗೆರೆಯ ಹೈಸ್ಕೂಲ್ ಮೈದಾನದ ಮುಂಭಾಗದ ರಸ್ತೆ ಇದು. ಕೆಎಸ್ಆರ್ಟಿಸಿ ಬಸ್‌ಗಳು ಹಾಗೂ ನಗರ ಸಾರಿಗೆ ಬಸ್ಸುಗಳನ್ನು ಪಿ.ಬಿ. ರಸ್ತೆ ಬದಿಯಲ್ಲಿಯೇ ನಿಲ್ಲಿಸುವುದರಿಂದ ಪದೇ ಪದೇ ಸಂಚಾರ ಅಸ್ತವ್ಯಸ್ತವಾಗುತ್ತಿದೆ. ಸಂಚಾರಿ ಪೊಲೀಸರಿದ್ದರೂ ಸಮಸ್ಯೆ ಬಗೆಹರಿಯದ ಕಾರಣ ವಾಹನ ಸವಾರರು ನಿತ್ಯವೂ ಪರಿತಪಿಸಬೇಕಾಗಿದೆ.

## ಪಂಜಾಬ್: ಸ್ವರ್ಣಮಂದಿರದ ಬಳಿ ಖಲಿಸ್ತಾನ್ ಪರ ಘೋಷಣೆ

ಅಮೃತಸರ, ಜೂ.6- ಪಂಜಾಬ್‌ನ ಅಮೃತ್‌ಸರದ ಸ್ವರ್ಣಮಂದಿರದ ಬಳಿ ಸೋಮವಾರ ಜಮಾಯಿಸಿದ್ದ ಗುಂಪೊಂದು ಖಲಿಸ್ತಾನ್ ಪರ ಘೋಷಣೆಗಳನ್ನು ಕೂಗಿದೆ. 1984ರಲ್ಲಿ ಭಾರತೀಯ ಸೇನೆ ಕೈಗೊಂಡಿದ್ದ 'ಆಪರೇಷನ್ ಬ್ಲೂಸ್ಟಾರ್' ಕಾರ್ಯಾಚರಣೆಯ 38ನೇ ವಾರ್ಷಿಕೋತ್ಸವ ದಿನವಾದ ಇಂದು ಈ ಘಟನೆ ನಡೆದಿದೆ. ಸ್ವರ್ಣಮಂದಿರದ ಬಳಿ ಸೇರಿದ್ದ ಗುಂಪು ಖಲಿಸ್ತಾನಿ ಪ್ರತ್ಯೇಕತಾವಾದಿ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ಪರ ಫಲಕಗಳನ್ನೂ ಪ್ರದರ್ಶಿಸಿದೆ ಎನ್ನಲಾಗಿದೆ.



'ಆಪರೇಷನ್ ಬ್ಲೂಸ್ಟಾರ್' ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕಳೆದ ವಾರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಕುರಿತು ಸಭೆ ನಡೆಸಿ ಪರಾಮರ್ಶೆ ಮಾಡಿದ್ದರು. ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಸೋಮವಾರ ಸ್ವರ್ಣಮಂದಿರಕ್ಕೆ ಬಿಗಿ ಭದ್ರತೆ ಕಲ್ಪಿಸಲಾಗಿತ್ತು.

## 27 ರಾಷ್ಟ್ರಗಳಲ್ಲಿ ಮಂಕಿಪಾಕ್ಸ್

ಜಿನೆವಾ, ಜೂ.6- ಮೇ 13ರಿಂದ ಜೂನ್ 2ರವರೆಗೆ 27 ರಾಷ್ಟ್ರಗಳಲ್ಲಿ ಒಟ್ಟು 780 ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಆಫ್ರಿಕಾ ಖಂಡದ ಏಳು ದೇಶಗಳಲ್ಲಿ ಈ ವರ್ಷ ಜೂನ್ 1ರವರೆಗೆ 44 ಪ್ರಕರಣಗಳು ಮತ್ತು 1,408 ಶಂಕಿತ ಪ್ರಕರಣಗಳು ಪತ್ತೆಯಾಗಿವೆ. ಅಲ್ಲದೆ 66 ಮಂದಿ ಮೃತಪಟ್ಟಿದ್ದಾರೆ ಎಂದು ತಿಳಿಸಿದೆ.



ಸಾಂಕ್ರಾಮಿಕ ಕುರಿತ ತನಿಖೆ ಪ್ರಗತಿಯಲ್ಲಿದೆ. ಈವರೆಗೆ ದೃಢಪಟ್ಟ ಹಲವು ಪ್ರಕರಣಗಳಲ್ಲಿ ಪಶ್ಚಿಮ ಆಫ್ರಿಕಾ ಮೂಲದ ತಳಿ ಪತ್ತೆಯಾಗಿದೆ. ಆಫ್ರಿಕಾದ ದಟ್ಟಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುವ ಸಿಡುಬು ವರ್ಗಕ್ಕೆ ಸೇರಿದ ಈ ವೈರಸ್ ಯುರೋಪ್ ಮತ್ತು ಉತ್ತರ ಅಮೆರಿಕದಲ್ಲೂ ಪತ್ತೆಯಾಗುತ್ತಿದೆ. ಆಫ್ರಿಕಾ ದೇಶಗಳಿಗೆ ಪ್ರಯಾಣಿಸಿದವರಲ್ಲೂ ಪತ್ತೆಯಾಗುತ್ತಿರುವುದರಿಂದ ಇದನ್ನು ಸಾಂಕ್ರಾಮಿಕ ಸ್ಫೋಟ ಎಂದು ಪರಿಗಣಿಸಲಾಗುತ್ತದೆ ಎಂದು ಎಚ್ಚರಿಸಿದೆ.

## ರೈತ ವಿರೋಧಿ ಕಾಯ್ದೆಗಳ ಹಿಂಪಡೆಗೆ ಆಗ್ರಹ




**ಅಖಿಲ ಭಾರತ ಕಿಸಾನ್ ಸಭಾ ದಾವಣಗೆರೆ ಜಿಲ್ಲಾ ಮಂಡಳಿಯಿಂದ ಪ್ರತಿಭಟನೆ**

ದಾವಣಗೆರೆ, ಜೂ.6- ಕೇಂದ್ರ ಸರ್ಕಾರ ರೈತ ವಿರೋಧಿ 3 ಕರಾಳ ಕಾಯ್ದೆಗಳನ್ನು ಹಿಂಪಡೆದಂತೆ ರಾಜ್ಯ ಸರ್ಕಾರವು ಕೂಡ ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಿದ ರೈತ ವಿರೋಧಿ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ನಗರದಲ್ಲಿ ಇಂದು ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾ ಮಂಡಳಿ ಪ್ರತಿಭಟನೆ ನಡೆಸಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ವೈಜ್ಞಾನಿಕ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿ ಸ್ಪಷ್ಟ ಕಾನೂನು ರೂಪಿಸಿ ಜಾರಿ ಮಾಡಬೇಕು. ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು, ಅದಕ್ಕೆ ಯೋಜನಾ ವೆಚ್ಚದ ಶೇ.50ರಷ್ಟು ವಿಶೇಷ ಅನುದಾನವಾಗಿ ಕೇಂದ್ರ ಸರ್ಕಾರ ನೀಡಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಎಐಕೆಎಸ್ ಜಿಲ್ಲಾಧ್ಯಕ್ಷ ಆವರಗೆರೆ ಹೆಚ್.ಜಿ. ಉಮೇಶ್, ರಾಜ್ಯದಲ್ಲಿ ಕೃಷಿ ಕ್ಷೇತ್ರಕ್ಕೆ ಈಗ ಸರಬರಾಜು ಆಗುತ್ತಿರುವ ವಿದ್ಯುತ್ ವಿಸ್ತರಿಸಿ 12 ಗಂಟೆ ನೀಡಬೇಕು. ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲು ಖಾಯಂ ವಿಶೇಷ ಕಾರ್ಯಪಡೆಯನ್ನು ನೇಮಿಸಬೇಕು.ಉದ್ಯೋಗ ಖಾತ್ರಿ ಯೋಜನೆಯನ್ನು 250 ಮಾನವ ದಿನಗಳಿಗೆ ಹೆಚ್ಚಿಸಬೇಕು ಹಾಗೂ ಅದಕ್ಕೆ ಹೆಚ್ಚಿನ ಅನುದಾನ ನೀಡಿ ಕನಿಷ್ಠ ಕೂಲಿ 600 ರೂ ಗಳಿಗೆ ಹೆಚ್ಚಿಸಬೇಕು ಒತ್ತಾಯಿಸಿದರು.


ರೈತರ ಬೆಳೆಗಳಿಗೆ ನಿಗದಿತ ಅವಧಿಯಲ್ಲಿ ಖರೀದಿ ಕೇಂದ್ರ ಆರಂಭಿಸಬೇಕು. ಸರ್ಕಾರದಿಂದ ಕೃಷಿ ಸಂಬಂಧಿತ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಸಿಗದೆ ವಂಚಿತರಾಗಿದ್ದಾರೆ. ಈ ಅವ್ಯವಹಾರ ತಡೆಯಲು ಸ್ಥಳೀಯ ಮಟ್ಟದಲ್ಲಿ ರೈತ ಸಂಘಟನೆ ಒಳಗೊಂಡಂತೆ ಸಮಿತಿಗಳನ್ನು ರಚಿಸಬೇಕು. 60 ವರ್ಷ ಮೇಲ್ಪಟ್ಟ ರೈತರಿಗೆ ಮಾಸಿಕ 5000 ಪಿಂಚಣಿ ನೀಡಬೇಕು. ರೈತರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕು ಎಂದು ಮನವಿ (2ನೇ ಪುಟಕ್ಕೆ)

# ಸಂಶೋಧನೆಗೆ ಪ್ರೋತ್ಸಾಹ

## ರಾಜ್ಯದಲ್ಲಿ ನೂತನ ಆರ್ ಅಂಡ್ ಡಿ ನೀತಿ ಜಾರಿ: ಬೊಮ್ಮಾಯಿ

ಬೆಂಗಳೂರು, ಜೂ.6 - ನೂತನ ಆರ್ ಅಂಡ್ ಡಿ ನೀತಿಯನ್ನು ಸರ್ಕಾರ ರೂಪಿಸಿದ್ದು, ಒಂದು ತಿಂಗಳ ಅವಧಿಯಲ್ಲಿ ಆರ್ ಅಂಡ್ ಡಿ ನೀತಿ ಹೊರಬೀಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನ್ಯಾಷನಲ್ ಕಾಲೇಜಿನಲ್ಲಿ ಶಿಕ್ಷಣ ತಜ್ಞ, ಪದ್ಮಭೂಷಣ ಡಾ. ಎಚ್.ನರಸಿಂಹಯ್ಯ ಅವರ 102 ನೇ ಜನ್ಮ ದಿನಾಚರಣೆ ಅಂಗವಾಗಿ ರೋಬೋಟಿಕ್ಸ್ ಮತ್ತು ಕೃತಕ ಬುದ್ದಿಮತ್ತೆ ಪ್ರಯೋಗಾಲಯದ ಉದ್ಘಾಟನೆ ಹಾಗೂ ಡಾ. ಹೆಚ್ ನರಸಿಂಹಯ್ಯ ಅವರ ಆತ್ಮಕಥನ ಪಾಥ್ ಆಫ್ ಸ್ಟ್ರಗಲ್ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.



**ಗ್ಯಾರೇಜ್ ನಿಂದ ಹಿಡಿದು ದೊಡ್ಡ ಸಂಸ್ಥೆಗಳಲ್ಲಿ ನಡೆಯುವ ಸಂಶೋಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ. ಹೊಸ ವಿಚಾರ, ಜ್ಞಾನ ಯಾರಿಗೆ ಬೇಕಾದರೂ ಬರಬಹುದು. ವೈಯಕ್ತಿಕವಾಗಿಯೂ ಸಂಶೋಧನೆ ಮಾಡುವವರಿಗೆ ಪ್ರೋತ್ಸಾಹ ನೀಡಲಾಗುವುದು.**

ನೂತನ ನೀತಿಯ ಸಂಪೂರ್ಣ ಉಪಯೋಗವನ್ನು ನ್ಯಾಷನಲ್ ಶಿಕ್ಷಣ ಸಂಸ್ಥೆ ಪಡೆಯಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಸರ್ಕಾರ ಸಂಸ್ಥೆಯ ಎಲ್ಲಾ ವೈಜ್ಞಾನಿಕ ಮತ್ತು ಸಂಶೋಧನಾ ಕಾರ್ಯಗಳಲ್ಲಿ ಜೊತೆ ನೀಡಲಿದೆ ಎಂದು ಭರವಸೆ ನೀಡಿದರು.

ಮಕ್ಕಳು ವಿಷಯದ ಬಗ್ಗೆ ಯಾಕೆ, ಏನು, ಎಲ್ಲಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಆಗ ತಾರ್ಕಿಕ ಚಿಂತನೆ ಬೆಳೆಯುತ್ತದೆ. ತಾರ್ಕಿಕ ಚಿಂತನೆ ಬಂದರೆ ಯಾವುದನ್ನೂ ಬಾಯಿಪಾಠ ಮಾಡುವ ಅವಶ್ಯಕತೆ ಇಲ್ಲ. ಪ್ರಶ್ನೆ ಕೇಳುವ ಅಧಿಕಾರ ಮಕ್ಕಳದ್ದು. ಮಕ್ಕಳ ಕುತೂಹಲವನ್ನು ಉಳಿಸಬೇಕು. ಕುತೂಹಲ ಸಂಶೋಧನೆಗೆ ದಾರಿ. ಈ ಮೂಲವನ್ನಿಟ್ಟುಕೊಂಡು ಕಲಿಕೆಯಾಗಬೇಕು ಎಂದರು.

ನೂತನ ಶಿಕ್ಷಣ ನೀತಿಯಲ್ಲಿ ಹೇಳಿರುವುದನ್ನು ನ್ಯಾಷನಲ್ ಶಿಕ್ಷಣ ಸಂಸ್ಥೆ ಜಾರಿಗೆ ತರುತ್ತಿದೆ. ನೂತನ ಶಿಕ್ಷಣ ನೀತಿ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತಂದಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಯೋಗಶೀಲತೆಯನ್ನು ತಂದಿರುವ ಶಿಕ್ಷಣ ನೀತಿ ವಿಜ್ಞಾನಕ್ಕೆ ಮಹತ್ವವನ್ನು ನೀಡಿದೆ.

ಸರ್ಕಾರದ ವತಿಯಿಂದ ಪ್ರತಿ ಶಾಲೆಗೆ 50 ಲಕ್ಷರೂ.ಗಳ ಮೌಲ್ಯದ ಅಟಲ್ ಪ್ರಯೋಗಾಲಯ ನಿರ್ಮಿಸಲಾಗುತ್ತಿದೆ. ಸಂಶೋಧನೆಗೆ ಇದರಿಂದ ಅವಕಾಶ ದೊರೆಯಲಿದೆ.

ಕರ್ನಾಟಕದಲ್ಲಿ ಈಗಾಗಲೇ ಅಂತಹ ನೂರಾರು ಪ್ರಯೋಗಾಲಯಗಳನ್ನು ತೆರೆಯಲಾಗಿದೆ. ನೂತನ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡಿರುವ ಈ ಸಂಸ್ಥೆಗೆ ಮುಂದೆ ಬಹಳ ದೊಡ್ಡ ಮಟ್ಟದಲ್ಲಿ ಅನುಕೂಲವಾಗಲಿದೆ ಎಂದರು.

ಕಷ್ಟಪಟ್ಟು ಕೆಲಸ ಮಾಡಿ, ಅಂದಿನ ಕೆಲಸ ಅಂದೇ ಮಾಡಿ, ಶ್ರದ್ಧೆಯಿಂದ ಓದಿ ಇವಿಷ್ಟನ್ನು ಮಾಡಿದರೆ ನಿಮ್ಮ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನ್ಯಾಷನಲ್ ಕಾಲೇಜು ಇತಿಹಾಸ ನಿರ್ಮಿಸಿರುವ ಶಿಕ್ಷಣ ಸಂಸ್ಥೆ. ಸುಸಂಸ್ಕೃತ, ವಿಜ್ಞಾನ ಸಂಸ್ಕಾರವುಳ್ಳ ಅಪರೂಪದ ಸಂಸ್ಥೆ. ಆಧುನಿಕ ಕಾಲದಲ್ಲಿ ತಮ್ಮ ವ್ಯಕ್ತಿತ್ವ, ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ ಎಂದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಬೆಂಗಳೂರು ಸ್ವರಾಜ್ಯದ ಜೊತೆ ಸುರಾಜ್ಯ ನಿರ್ಮಿಸಬೇಕೆನ್ನುವ ಮಹಾತ್ಮಾ ಗಾಂಧಿಯವರ ಆಶಯವನ್ನು ಸಾಕಾರ ಮಾಡಲು ಅಕ್ಷರಶ: ಶ್ರಮಿಸಿದೆ. ಗಾಂಧಿಯವರ ಗುಣಧರ್ಮವನ್ನು ನ್ಯಾಷನಲ್ ಎಜುಕೇಷನ್ ಸಂಸ್ಥೆಗಳಲ್ಲಿ ಕಾಣಬಹುದಾಗಿದೆ ಎಂದರು.

ಈ ದೇಶದ ಸನಾತನ ಮೌಲ್ಯಗಳನ್ನು ಉಳಿಸಿಕೊಂಡು, ಆಧುನಿಕ ಭಾರತ ನಿರ್ಮಾಣ ಮಾಡುವ ಕೆಲಸವನ್ನು ನರಸಿಂಹಯ್ಯನವರು ಮಾಡಿದರು. ವೈಜ್ಞಾನಿಕ ಮನೋಭಾವ, ವಿಚಾರವಾದಿಯಾಗಿದ್ದ ಅವರು (2ನೇ ಪುಟಕ್ಕೆ)

## ಕೋವಿಡ್ ಸಂಪೂರ್ಣ ನಿಯಂತ್ರಣ ; ಗಾಬರಿ ಬೇಡ

ಬೆಂಗಳೂರು, ಜೂ.6 - ಕೋವಿಡ್ ಸಂಪೂರ್ಣ ನಿಯಂತ್ರಣದಲ್ಲಿದ್ದು, ಅನಗತ್ಯವಾಗಿ ಯಾರೂ ಗಾಬರಿಯಾಗುವ ಅವಶ್ಯಕತೆ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಕೋವಿಡ್ ನಿರ್ವಹಣೆ ಬಗ್ಗೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸಭೆ ನಡೆಸಿ ಎಲ್ಲಾ ಜಿಲ್ಲೆಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿ ಸಲ್ಲಿಸಲಿದ್ದಾರೆ. ಅದರ ಆಧಾರದ ಮೇಲೆ 2-3 ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಪಠ್ಯ ಪರಿಷ್ಕರಣೆ ಸಮಿತಿ ವಿಸರ್ಜನೆ ಮೊದಲ ಬಾರಿ ಆಗುತ್ತಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲದರಲ್ಲೂ ರಾಜಕಾರಣ ಮಾಡುತ್ತಾರೆ.

ರಾಜ್ಯದಲ್ಲಿ ಈ ಬಗ್ಗೆ ಹಲವಾರು ಬಾರಿ ಬದಲಾವಣೆಗಳಾಗಿವೆ. ಅವರ ಕಾಲದಲ್ಲಿಯೂ ಹೀಗೆ ಆಗಿದೆ. ಆಗೇನು ಅವರು ಪಠ್ಯ ಪುಸ್ತಕ ಪರಿಷ್ಕರಣೆ ಹಿಂದೆಗೆದುಕೊಂಡರೆ? ಸುಮ್ಮನೆ ಗೊಂದಲ ಸೃಷ್ಟಿ ಮಾಡಬಾರದು.

ನಾವು ಈ ಬಗ್ಗೆ ಮುಕ್ತವಾಗಿದ್ದೇವೆ. ತಪ್ಪುಗಳನ್ನು ಸರಿಪಡಿಸಲು ಸಿದ್ಧರಿದ್ದೇವೆ. ಅದ್ಯಾವುದರ ಬಗ್ಗೆಯೇ ಆಗಲೀ ಸರಿಪಡಿಸಿ ಮರು ಮುದ್ರಣ ಮಾಡಲಾಗುವುದು. ಪೀರ್ ಪಾಷಾ ದರ್ಗಾ ಕುರಿತು ಸಂಶೋಧನೆ ಮಾಡುವಂತೆ ಸ್ವಾಮೀಜಿಗಳು ಮನವಿ ನೀಡಿದ್ದಾರೆ. ಪುರಾತತ್ವ ಇಲಾಖೆ ಪರಿಶೀಲನೆ ನಡೆಸಲಿದೆ ಎಂದು ಮುಖ್ಯಮಂತ್ರಿ ಗಳು ತಿಳಿಸಿದರು.

**ತಲಾ 5 ಲಕ್ಷ ರೂ.ಗಳ ಪರಿಹಾರ:** ರಾಯಚೂರಿನಲ್ಲಿ ಕಲುಷಿತ ನೀರು ಕುಡಿದು ಮೂವರು ಸಾವಿಗೀಡಾಗಿರುವವರಿಗೆ ಮುಖ್ಯಮಂತ್ರಿಗಳ (2ನೇ ಪುಟಕ್ಕೆ)

## 2026ಕ್ಕೆ ದೇಶದ ಮೊದಲ ಬುಲೆಟ್ ರೈಲು

ಸೂರತ್, ಜೂ.6- 2026ರ ಒಳಗಾಗಿ ಗುಜರಾತ್‌ನ ಸೂರತ್ ಮತ್ತು ಬಿಲಿಮೊರಾ ನಗರಗಳ ಮಧ್ಯೆ ಮೊದಲ ಹಂತದ ಹಾಗೂ ದೇಶದ ಮೊದಲ ಬುಲೆಟ್ ರೈಲು ಸೇವೆ ಆರಂಭವಾಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಆಶಯ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿ ಅವರ ಮಹತ್ವಾಕಾಂಕ್ಷೆಯ ಅಹಮದಾಬಾದ್-ಮುಂಬೈ ಮಧ್ಯೆ ಬುಲೆಟ್ ರೈಲು ಯೋಜನೆಯ ಕಾಮಗಾರಿ ಪರಿಶೀಲನೆಗಾಗಿ ಸೋಮವಾರ ಇಲ್ಲಿಗೆ ಬಂದ ಸಚಿವರು, ಈ ಯೋಜನೆಯ ಮೂಲಭೂತ ಸೌಕರ್ಯ ನಿರ್ಮಾಣದಲ್ಲಿ ಉತ್ತಮ ಪ್ರಗತಿ ಕಂಡುಬಂದಿದೆ ಎಂದು ಹೇಳಿದರು.

ಪ್ರತಿ ಗಂಟೆಗೆ 308 ಕಿ.ಮೀ ವೇಗದಲ್ಲಿ ಚಲಿಸುವ ಬುಲೆಟ್ ರೈಲು ಅಹಮದಾಬಾದ್‌ನಿಂದ 508 ಕಿ.ಮೀ ದೂರದಲ್ಲಿರುವ ಮುಂಬೈ ನಗರವನ್ನು 3 ಗಂಟೆಗಳಲ್ಲಿ ಕ್ರಮಿಸಲಿದೆ. ಪ್ರಸ್ತುತ ಎಕ್ಸ್‌ಪ್ರೆಸ್ ರೈಲುಗಳು 508 ಕಿ.ಮೀ ಕ್ರಮಿಸಲು 6 ಗಂಟೆ ತೆಗೆದುಕೊಳ್ಳುತ್ತಿವೆ.

## ನಂದಿಗುಡಿ ಮಠ, ಹಾಸ್ಟೆಲ್ ಅಭಿವೃದ್ಧಿಗೆ ಕೈ ಜೋಡಿಸಲು ಶ್ರೀಗಳ ಕರೆ

ಮಲೇಬೆನ್ನೂರು, ಜೂ. 6- ನಂದಿಗುಡಿ ಮಠ ಹಾಗೂ ದಾವಣಗೆರೆಯ ನಂದಿಗುಡಿ ಹಾಸ್ಟೆಲ್ ಅಭಿವೃದ್ಧಿಗೆ ಭಕ್ತರು ಕೈ ಜೋಡಿಸುವಂತೆ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮನವಿ ಮಾಡಿದರು.



ಅವರು ಶನಿವಾರ ನಂದಿಗುಡಿ ಬೃಹನ್ಮಠದಲ್ಲಿ ಕರೆದಿದ್ದ ನೊಳಂಬ ವೀರಶೈವ ಸಮಾಜದ ಮುಖಂಡರ ಹಾಗೂ ಭಕ್ತರ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಠ ಹಾಗೂ ಸಮಾಜವನ್ನು ಬಲಿಷ್ಠವಾಗಿ ಬೆಳೆಸಲು ಭಕ್ತರ ಸಹಕಾರ ಬಹಳ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಈ ಸಭೆ ಕರೆದಿದ್ದು, ಎಲ್ಲರೂ ದಾವಣಗೆರೆ ನಗರದಲ್ಲಿ ನಂದಿಗುಡಿ ಮಠದ ಹಾಸ್ಟೆಲ್‌ನ ನೂತನ ಕಟ್ಟಡ ನಿರ್ಮಾಣಕ್ಕೆ ಕಂಕಣಬದ್ಧರಾಗಬೇಕೆಂದರು. ನಂದಿಗುಡಿ (2ನೇ ಪುಟಕ್ಕೆ)

## 13 ರಂದು ರಾಜ್ಯಕ್ಕೆ ರಾಷ್ಟ್ರಪತಿ



ಬೆಂಗಳೂರು, ಜೂ.6 - ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಎರಡು-ದಿನಗಳ ಅಧಿಕೃತ ರಾಜ್ಯ ಭೇಟಿಗಾಗಿ ಜೂನ್ 13 ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ.

ರಾಜ್ಯದ ರಾಜಧಾನಿಗೆ ತಲುಪಿರುವ ಪ್ರವಾಸ ವಿವರಗಳ ಪ್ರಕಾರ, ರಾಷ್ಟ್ರಪತಿಯವರು ಸೋಮವಾರ ಬೆಳಿಗ್ಗೆ ಬೆಂಗಳೂರು ತಲುಪಲಿದ್ದಾರೆ. ನಂತರ, ಅವರು ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ (4ನೇ ಪುಟಕ್ಕೆ)

## ಉದ್ಯಮಿಗಳು, ಬಿಲ್ಡರ್‌ಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ

ಬೆಂಗಳೂರು, ಜೂ.6 - ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ರಾಷ್ಟ್ರೀಯ ಪಕ್ಷವೊಂದರ ಬೆಂಬಲಿತ ಉದ್ಯಮಿಗಳು, ಬಿಲ್ಡರ್‌ಗಳು ಹಾಗೂ ಆ ಪಕ್ಷಕ್ಕೆ ಸೇರಿದ ಶಾಸಕರು ಮತ್ತು ಮುಖಂಡರ ನಿವಾಸ ಮತ್ತು ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದೆ.

ಕಳೆದ ಕೆಲವು ದಿನಗಳಿಂದ ಅತ್ಯಂತ ಗೌಪ್ಯವಾಗಿ ಶಿಕ್ಷಣ ಸಂಸ್ಥೆ, ಉದ್ದಿಮೆ ನಡೆಸುತ್ತಿರುವ ಮುಖಂಡರ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿ ದೊಡ್ಡ ಪ್ರಮಾಣದಲ್ಲಿ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದೆ.

ಉದ್ದಿಮೆದಾರರ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸುವುದು ಸಹಜ. ಆದರೆ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಕಳೆದ ಒಂದು ತಿಂಗಳಲ್ಲಿ ಈ ಪ್ರಭಾವಿಗಳ ನಿವಾಸ, ಸಂಸ್ಥೆಗಳ ಮೇಲೆ ದಾಳಿ ಮಾಡಲಾಗಿದೆ. ದಾಳಿಗೆ ಒಳಪಟ್ಟವರು ಏನನ್ನೂ ಇದುವರೆಗೆ ಬಹಿರಂಗಪಡಿಸಿಲ್ಲ. ಮಾಧ್ಯಮಗಳ ಮುಂದೆಯೂ ಹೇಳಿಕೊಂಡಿಲ್ಲ, ಇಲಾಖೆ ಹೊಂದಿರುವ ಮಾಹಿತಿ ಆಧಾರದ ಮೇಲೆ ಈ ದಾಳಿಗಳು ನಡೆದಿವೆ.

ದಾಳಿಯ ಸಂದರ್ಭದಲ್ಲಿ ಉತ್ತರ ಪ್ರದೇಶದ ಅಧಿಕಾರಿಗಳನ್ನೇ ಸ್ಥಳೀಯ ಅಧಿಕಾರಿಗಳ ಸಹಯೋಗದೊಂದಿಗೆ ಬಳಸಿ ದಾಳಿ ನಡೆಸಲಾಗಿದೆ. ಈ ರೀತಿ ಸುಮಾರು 600 ಕಡೆ ಇಂತಹ ದಾಳಿಗಳು ನಡೆದಿವೆ ಎಂದು ತಿಳಿದು ಬಂದಿದೆ.

ರಾಜ್ಯದ ಗೃಹ ಸಚಿವರಾಗಿ ಹಾಲಿ ಪ್ರಭಾವಿ ಶಾಸಕರ ಕಚೇರಿಗಳ ಮೇಲೆ ಕಳೆದ ನಾಲ್ಕು ದಿನಗಳಿಂದ ನಿರಂತರವಾಗಿ ತನಿಖೆ ನಡೆಸಿದ್ದು, ಇಂದು ಕೊನೆಗೊಳಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ-ಪಾಸ್ತಿ ಹೊಂದಿದ್ದು, ಇಲಾಖೆಗೆ ಪೂರಕ ದಾಖಲೆ ಒದಗಿಸದೇ ಸರ್ಕಾರಕ್ಕೆ ತೆರಿಗೆ ವಂಚಿಸಿದ್ದವರಿಗೆ ನೋಟಿಸ್ ನೀಡಿ ವಿವರಣೆ ಕೇಳಲಾಗಿದೆ. ಇನ್ನೂ ವಿಧಾನಸಭೆ ಚುನಾವಣೆ ಪೂರ್ಣಗೊಳ್ಳುವವರೆಗೂ ನಿರಂತರ ದಾಳಿ ಸಹಜ ಎಂದು ತಮ್ಮ ಹೆಸರನ್ನು ಹೇಳಲು ಇಚ್ಚಿಸದ ಮುಖಂಡರೊಬ್ಬರು ತಿಳಿಸಿದ್ದಾರೆ. ಚುನಾವಣೆ ವೇಳೆ ಕಪ್ಪು ಹಣ ಬಳಕೆಗೆ ಇತಿಶ್ರೀ ಹಾಡಲು ಈ ದಾಳಿ ನಡೆದಿರಬಹುದು ಎನ್ನಲಾಗಿದೆ.

## ಆಕ್ಮೆ ಕ್ಲೀನ್ ಟೆಕ್‌ನಿಂದ ರಾಜ್ಯದಲ್ಲಿ 52 ಸಾವಿರ ಕೋ.ರೂ. ಹೂಡಿಕೆ

ಬೆಂಗಳೂರು, ಜೂ.6 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಇಂದು ಗುರು ಗ್ರಾಮ ಮೂಲದ ಆಕ್ಮೆ ಕ್ಲೀನ್ ಟೆಕ್ ಸಲ್ಯೂಷನ್ಸ್ ಕಂಪೆನಿ ಮಂಗಳೂರಿನಲ್ಲಿ ಹೈಡ್ರೋಜನ್ ಮತ್ತು ಅಮೋನಿಯಾ ಘಟಕ ಹಾಗೂ ಪೂರಕವಾಗಿ ಸೋಲಾರ್ ಘಟಕ ಸ್ಥಾಪನೆಗೆ 52 ಸಾವಿರ ಕೋಟಿ ರೂ. ಹೂಡಿಕೆ ಮಾಡುವ ಸಂಬಂಧ ರಾಜ್ಯ ಸರ್ಕಾರದೊಂದಿಗೆ ಮಹತ್ವದ ಒಪ್ಪಂದ ಮಾಡಿಕೊಂಡಿದೆ.

ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣ ರೆಡ್ಡಿ ಹಾಗೂ ಆಕ್ಮೆ ಗ್ರೂಪ್ ಕಂಪೆನಿಯ ಸಿಓಓ ಸಂದೀಪ್ ಕಶ್ಯಪ್ ಅವರು ಒಪ್ಪಂದಕ್ಕೆ ಸಹಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯ ಸರ್ಕಾರವು ಗ್ರೀನ್ ಹೈಡ್ರೋಜನ್ ನೀತಿಯನ್ನು ರೂಪಿಸುತ್ತಿದ್ದು, ಇದರ ಲಾಭ ಪಡೆದುಕೊಳ್ಳುವಂತೆ ಆಕ್ಮೆ ಗ್ರೂಪ್ ನವರಿಗೆ ಸಲಹೆ ನೀಡಿದರು.

ಕರ್ನಾಟಕ ರಾಜ್ಯವು ಸದಾ ಹೊಸ ತಂತ್ರಜ್ಞಾನ, ಭವಿಷ್ಯದ ಯೋಜನೆಗಳಿಗೆ ಉತ್ತೇಜನ ನೀಡುತ್ತಾ ಬಂದಿದೆ. ಈ ಯೋಜನೆ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ತ್ವರಿತವಾಗಿ ಎಲ್ಲ (4ನೇ ಪುಟಕ್ಕೆ)




# ವಿಚಾರ ಹಂಚುವಿಕೆಯಲ್ಲಿ ಜಗಳ ನಿವಾರಣೆ ಮಾಡುವ ಮಾರ್ಗವಿದೆ

## ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠದಲ್ಲಿನ ಶರಣ ಸಂಗಮ ಕಾರ್ಯಕ್ರಮದಲ್ಲಿ ಮುರುಘಾ ಶರಣರು




ಚಿತ್ರದುರ್ಗ ಜೂ. 6- ಕೆಲವರು ಆಸ್ತಿ, ಹಣ ಹಂಚಿಕೊಂಡರೆ ವಿಚಾರವಂತರು ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಆಸ್ತಿ ಹಂಚುವಿಕೆಯಲ್ಲಿ ಜಗಳ ಉಂಟಾಗುತ್ತದೆ. ಆದರೆ ವಿಚಾರ ಹಂಚುವಿಕೆಯಲ್ಲಿ ಜಗಳವನ್ನು ನಿವಾರಣೆ ಮಾಡುವ ಮಾರ್ಗವಿದೆ ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಪ್ರತಿಪಾದಿಸಿದರು.

ನಗರದ ಬಸವ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ, ಶ್ರೀ ಬೃಹನ್ಮಠ ಸಂಯುಕ್ತ ಪ.ಪೂ. ಕಾಲೇಜು ಇವರ ಸಹಯೋಗ ದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶರಣರು ಆಶೀರ್ವಚನ ನೀಡಿದರು.

ಮಾನವ ಲೋಕದಲ್ಲಿ ಗಹನವಾದ ಸಮಸ್ಯೆಗಳು ಇವೆ. ಎಲ್ಲ ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಮಾಜ ಸುಧಾರಕರು ಏನೆಲ್ಲ ಪರಿವರ್ತನೆ ಉಂಟು ಮಾಡಿದ್ದಾರೆ. ಹಾಗಾಗಿ ಪ್ರಜ್ಞೆ ಇರಬೇಕು. ಗುರುವಿನಲ್ಲಿ ಮತ್ತು ಶಿಷ್ಯನಲ್ಲಿ ಪ್ರಜ್ಞೆ ಇರಬೇಕು. ಗುರು ಎಂದರೆ ಪ್ರಜ್ಞೆಯ ಸಂಕೇತ. ಸೀಮಿತ ಪ್ರಜ್ಞೆಗೆ ಒಳಗಾಗಬಾರದು. ಚೌಕಟ್ಟು ಹಾಕಿಕೊಳ್ಳಬಾರದು. ಅದು ಮತೀಯ, ಜಾತಿಯ ಸಂಕುಚಿತ ಪ್ರಜ್ಞೆ ಎನ್ನಿಸಿಕೊಳ್ಳುತ್ತದೆ. ಮಾನವ ತನ್ನ ಪ್ರಯತ್ನದ ಮೂಲಕ ಅನುಭವದ ಮೂಲಕ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕೆಂದರು.

ಪ್ರಜ್ಞೆಯ ಬೆಳವಣಿಗೆ ವ್ಯಕ್ತಿತ್ವದ ಬೆಳವಣಿಯಾಗಿದೆ. ಅನೇಕರಿಗೆ ತಮ್ಮ ತಲೆಯಲ್ಲಿರುವ ಮಿದುಳಿಗೆ ಅಪ್ರತಿಮ ಶಕ್ತಿ ಇದೆ ಎಂದು ತಿಳಿಯುವುದಿಲ್ಲ. ಲೌಕಿಕ ಅಥವಾ ಭೌತಿಕವಾಗಿರುವ ಪ್ರಜ್ಞೆ ಇರಬಾರದು. ಯಾರಿಗೆ ವಸ್ತುಗಳ ಮೇಲಿನ ಮೋಹ ಹೆಚ್ಚಾಗಿರುತ್ತದೋ ಅವರದು ಭೌತಿಕ ಪ್ರಜ್ಞೆ. ಭೌತಿಕ ಪ್ರಜ್ಞೆಯಿಂದ ವಿಶ್ವಪ್ರಜ್ಞೆಯ ಕಡೆಗೆ ಬರುವ ಪ್ರಯತ್ನ ಮಾಡಬೇಕು. ವಿಶ್ವಪ್ರಜ್ಞೆ ಉಳ್ಳವರು ವಿಶ್ವ ಗುರುವಾಗುತ್ತಾರೆ. ಜಾತಿ ಒಳಗಿದ್ದು ಜಾತಿ ಮೀರುವವರು ವಿಶ್ವ ಗುರು, ವಿಶ್ವಮಾನವರಾಗುತ್ತಾರೆ ಎಂದು ತಿಳಿಸಿದರು.

ದಾವಣಗೆರೆಯ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ದೊಡ್ಡಗೌಡರ್ ಅವರು 'ಗುರುತ್ವ - ವಿಶ್ವ ಮಾನವತ್ವ ಸಾಧ್ಯವೇ?' ವಿಷಯ ಕುರಿತು ಮಾತನಾಡಿ, ಗುರುತ್ವ ಎಂದರೆ ಆಕರ್ಷಣಾ ಮೌಲ್ಯ. ಮಾನವನಿಗೆ ಗುರುತ್ವ ಬೇಕು. ಅದು ಮಾನವೀಯ ಮೌಲ್ಯ. ಅಂತಹ ಮೌಲ್ಯ ವಿಶ್ವಮಾನವತ್ವದೆಡೆಗೆ ಕೊಂಡೊಯ್ಯುತ್ತದೆ. ಮಗು ಹುಟ್ಟಿದಾಗ ಮನೆಯಲ್ಲಿ ಜಾತಿ, ಮತ ಎಂದು ಹೇಳುತ್ತಾ ಅವನಲ್ಲಿ ಅಲ್ಪ ಮಾನವತ್ವವನ್ನು ತುಂಬುತ್ತೇವೆ. ಬಸವಣ್ಣನವರ ಕಳಬೇಡ, ಕೊಲಬೇಡ ವಚನದಂತೆ ನಡೆದರೆ ಮಾನವರಾಗುತ್ತೇವೆ. ಈಗ ರಾಜಕೀಯ ಕಾಲ ಮುಗಿಯುತ್ತಿದೆ. ಅಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಿದೆ. ಕಾರಣ ಮಕ್ಕಳಲ್ಲಿ ಅಧ್ಯಾತ್ಮದೆಡೆಗಿನ ಒಲವು ಕಡಿಮೆಯಾಗುತ್ತಿದ್ದು, ಅವರನ್ನು ಮತ್ತೆ ಅಧ್ಯಾತ್ಮಿಕತೆಯತ್ತ ತರುವ ಕೆಲಸವಾಗಬೇಕಿದೆ. ಕುವೆಂಪು ಅವರ ಪಂಚಸೂತ್ರಗಳು ನಮಗೆ ಮುಖ್ಯವಾಗುತ್ತವೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಎಂ.ಎಸ್. ಬಸವರಾಜಯ್ಯ ಮಾತನಾಡಿ, ವಿಶ್ವಗುರುವೆಂದು ಬಸವಣ್ಣನವರನ್ನು ಮಾತ್ರ ಕರೆಯುತ್ತಾರೆ. ಮನುಷ್ಯ ಆಸೆಯನ್ನು ಬಿಟ್ಟಾಗ ಮನುಷ್ಯನಾಗುತ್ತಾನೆ. ಇನ್ನೊಬ್ಬನಿಗೆ ಒಳಿತಾಗಲಿ ಎಂಬ ಆಸೆ ಇರಬೇಕು. ವಿವೇಕಾನಂದರು ಆಸೆ ಇಲ್ಲದೆ ಸಮಾಜಕ್ಕಾಗಿ ದುಡಿದರು. ಹಾಗಾಗಿ ವಿಶ್ವಮಾನವರಾದರು. ಮನುಷ್ಯ ಮನೆಗೆ ಮಾರಿ ಆದರೂ ಪರವಾಗಿಲ್ಲ ಸೋಮಾರಿ ಆಗಬಾರದು ಎಂದರು.

> ಮತದಿಂದ ಯಾವಾಗಲು ಗುಂಪು ಕಟ್ಟುವ ಕೆಲಸವಾಗಬಾರದು. ನಮ್ಮಲ್ಲಿ ಮತಾಂಧತೆ ಜಾಸ್ತಿಯಾಗುತ್ತಿದೆ. ಯಾವ ಗ್ರಂಥವು ಪರಮಪೂಜ್ಯ ಗ್ರಂಥವಾಗಬಾರದು. ಎಲ್ಲ ಧರ್ಮ ಗ್ರಂಥಗಳು ಒಂದೇ ಆಗಿವೆ. ಮಗುವನ್ನು ಭಾಷೆ, ಧರ್ಮ, ಮತದಿಂದ ಹೊರತರಬೇಕು. ಅಂದಾಗ ಮಾತ್ರ ಅವನಲ್ಲಿ ಗುರುತ್ವ ಶಕ್ತಿ ಅನಾವರಣಗೊಳ್ಳುತ್ತದೆ. ಮಾನವನಲ್ಲಿ ಮಾನವೀಯ ಮೌಲ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗಬೇಕು. ಆಗ ಮಕ್ಕಳು ವಿಶ್ವಮಾನವರಾಗಲು ಅವಕಾಶ ಸಿಗುತ್ತದೆ.
>
> **-ಡಾ. ಅನಿತಾ ದೊಡ್ಡಗೌಡರ್,**
> ಸಹಾಯಕ ಪ್ರಾಧ್ಯಾಪಕರು, ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಶ್ರೀ ಬೃಹನ್ಮಠ ಸಂ.ಪ.ಪೂ. ಕಾಲೇಜಿನ ಪ್ರಾಚಾರ್ಯ ಎಸ್.ಷಡಾಕ್ಷರಯ್ಯ ಸ್ವಾಗತಿಸಿದರು. ರಾಜೇಶ್ ನಿರೂಪಿಸಿದರು.

# ಪ್ರೊ. ಬಿ.ಕೃಷ್ಣಪ್ಪ ಜಯಂತಿ ಹರಿಹರದಲ್ಲಿ ಬೈಕ್ ರ್‍ಯಾಲಿ



ಹರಿಹರ, ಜೂ.6- ಚಿಂತಕ, ಹೋರಾಟಗಾರ ಕರ್ನಾಟಕದ ಅಂಬೇಡ್ಕರ್ ಖ್ಯಾತಿಯ ಮಹಾತ್ಮ ಪ್ರೊ. ಬಿ.ಕೃಷ್ಣಪ್ಪ ಜಯಂತಿ ಅಂಗವಾಗಿ ಚಿತ್ರದುರ್ಗದಲ್ಲಿ ನಡೆಯುವ ಸಮಾವೇಶಕ್ಕೆ ಹರಿಹರದಿಂದ ಬೈಕ್ ರ್‍ಯಾಲಿ ಮೂಲಕ ತೆರಳಲು ನಿರ್ಣಯಿಸಿರುವುದಾಗಿ ದಲಿತ ಸಂಘಟನೆಗಳ ಒಕ್ಕೂಟದ ಹಾಗು ಬಿ.ಎಸ್.ಪಿ ಮುಖಂಡ ಡಿ.ಹನುಮಂತಪ್ಪ ಹೇಳಿದರು.

ಇದೇ ದಿನಾಂಕ 9 ರಂದು ಕೃಷ್ಣಪ್ಪನವರ ಜಯಂತಿ ನಿಮಿತ್ತವಾಗಿ ಅಂದು ಚಿತ್ರದುರ್ಗದಲ್ಲಿ ವಿಶೇಷ ಸಮಾವೇಶ ನಡೆಯಲಿದೆ. ಆದಕಾರಣ ಹರಿಹರ ನಗರದ ಬೈಕ್ ರ್‍ಯಾಲಿಯೊಂದಿಗೆ ಚಿತ್ರದುರ್ಗಕ್ಕೆ ತೆರಳುತ್ತಿರುವುದಾಗಿ ತಿಳಿಸಿದರು.

ನಗರದ ಎ.ಕೆ.ಕಾಲೋನಿಗೆ ಪ್ರೊ.ಬಿ. ಕೃಷ್ಣಪ್ಪನವರ ಹೆಸರನ್ನು ನಾಮಕರಣ ಮಾಡುವಂತೆ ನಗರಸಭೆ ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಒತ್ತಾಯಿಸುವುದಾಗಿ ತಿಳಿಸಿದರು.

ಮೊದಲನೇ ಹಂತದ ಹೋರಾಟವಾಗಿ ಪ್ರೊ. ಬಿ. ಕೃಷ್ಣಪ್ಪನವರ ಪುಣ್ಯಭೂಮಿ ಹರಿಹರ ಮೈತ್ರಿ ವನದಿಂದ ಚಿತ್ರದುರ್ಗದ ಅಂಬೇಡ್ಕರ್ ಪ್ರತಿಮೆ ತನಕ ಒಂದು ದಿನದ 'ದಲಿತ ಚಳುವಳಿಯ ಪುನರುಜ್ಜೀವನ ಜಾಗೃತಿ ಜಾಥಾ'ವನ್ನು ಗುರುವಾರ ಏರ್ಪಡಿಸಲಾಗಿದ್ದು, ಜಾಥಾವು ಬೆಳಗ್ಗ ಹೊರಡಲಿದೆ.

ಈ ಸಂದರ್ಭದಲ್ಲಿ ಎಸ್. ಕೇಶವ, ಎಂ.ಎಸ್. ಶ್ರೀನಿವಾಸ್ , ಜಿಲ್ಲಾ ದಸಂಸ ಸಂಚಾಲಕ ಆರ್. ಶ್ರೀನಿವಾಸ್, ಮಂಜುನಾಥ್ ಕೊಪ್ಪಳ, ಆರ್. ಆನಂದ್, ಪ್ರವೀಣ್ ಕುಮಾರ್, ಭೀಮಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಸ್ಥಳೀಯ ಮಾರುಕಟ್ಟೆಯಿಂದ ರೈತರಿಗೆ ಆರ್ಥಿಕ ಸಬಲತೆ



ಹೊನ್ನಾಳಿ, ಜೂ. 6- ಕೃಷಿ ಉತ್ಪನ್ನಗಳಿಗೆ ಸ್ಥಳೀಯವಾಗಿ ಮಾರುಕಟ್ಟೆ ಲಭಿಸಿದರೆ ರೈತರು ಆರ್ಥಿಕವಾಗಿ ಸಬಲರಾಗುತ್ತಾರೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಸೋಮವಾರ ರೈತರೊಂದಿಗೊಂದು ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಉತ್ಪನ್ನಗಳನ್ನು ರೈತರಿಂದ ಸ್ಥಳೀಯವಾಗಿ ಖರೀದಿಸಿ ಸ್ಥಳೀಯ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರೈತ ಉತ್ಪಾದಕ ಕಂಪನಿಗಳು ಕಾರ್ಯೋನ್ಮುಖವಾಗಬೇಕು ಎಂದು ತಿಳಿಸಿದರು.

ಅರಕೆರೆ ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ 'ಹೊನ್ನತ್ತೆಮ್ಮ ರೈತ ಬಂಧು ರೈತ ಉತ್ಪಾದಕ ಕಂಪನಿ'ಗೆ ಅವರು ಚಾಲನೆ ನೀಡಿ ಶುಭ ಹಾರೈಸಿದರು.

ಹೊನ್ನತ್ತೆಮ್ಮ ರೈತ ಬಂಧು ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಅರಕೆರೆ ಎ.ಬಿ. ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ವಿ. ಚಿಂತಾಲ್, ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಜಿ.ಸಿ. ರಾಘವೇಂದ್ರ ಪ್ರಸಾದ್, ಸಹಾಯಕ ಕೃಷಿ ನಿರ್ದೇಶಕರಾದ ಎ.ಎಸ್. ಪ್ರತಿಮಾ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಜಿ.ಆರ್. ವೀರಭದ್ರಸ್ವಾಮಿ, ಕಸಬಾ ಎಫ್‌ಓ ಡಾ.ಎಚ್. ವಿಕಾಸ್, ಕಸಬಾ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅತೀಕ್ ಉಲ್ಲಾ, ಅರಕೆರೆ ಗ್ರಾ.ಪಂ. ಅಧ್ಯಕ್ಷ ನರಸಗೊಂಡನಹಳ್ಳಿ ಎನ್.ಆರ್. ಮಂಜುನಾಥ್ ಇತರರು ಮಾತನಾಡಿದರು.

ಹೊನ್ನತ್ತೆಮ್ಮ ರೈತ ಬಂಧು ರೈತ ಉತ್ಪಾದಕ ಕಂಪನಿಯ ಉಪಾಧ್ಯಕ್ಷ ಸಿ.ಎಚ್. ಅಶೋಕ್, ನಿರ್ದೇಶಕರಾದ ಅರಕೆರೆ ಬಸವನಗೌಡ್ರು, ಎಂ. ಲಿಂಗರಾಜ್, ಎ. ಹಾಲೇಶ್, ಎಸ್. ಚಂದ್ರಶೇಖರಪ್ಪ, ಮಾಸಡಿ ಎಂ.ಎಚ್. ರಂಗನಾಥ್, ಬಿ.ಎನ್. ಹರೀಶ್, ಸಿಂಗಟಗೆರೆ ಎಸ್.ಜಿ. ವೀರಪ್ಪ, ತರಗನಹಳ್ಳಿ ಬಿ.ಎಂ. ಬಸವರಾಜಪ್ಪ, ನರಸಗೊಂಡನಹಳ್ಳಿ ಎ.ಜಿ. ರವಿಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಂದಿಗುಡಿ ಮಠ, ಹಾಸ್ಟೆಲ್ ಅಭಿವೃದ್ಧಿಗೆ ಕೈ ಜೋಡಿಸಲು ಶ್ರೀಗಳ ಕರೆ

**(1ನೇ ಪುಟದಿಂದ)** ಮಠದ ಅಭಿವೃದ್ಧಿಗೆ ಸರ್ಕಾರ 2 ಕೋಟಿ ರೂ. ಅನುದಾನ ಬಿಡುಗಡೆಗೆ ಆದೇಶ ನೀಡಿದ್ದರೂ, ಇನ್ನೂ ಬಿಡುಗಡೆ ಆಗಿಲ್ಲ. ಈ ಬಗ್ಗೆ ಸಮಾಜದ ಮುಖಂಡರು ಗಮನ ಹರಿಸಬೇಕೆಂದು ಸ್ವಾಮೀಜಿ ಹೇಳಿದರು.

ನೊಳಂಬ ವೀರಶೈವ ಸಂಘದ ಕೇಂದ್ರ ಸಮಿತಿ ನಿರ್ದೇಶಕರಾದ ಡಾ. ಡಿ.ಬಿ. ಗಂಗಪ್ಪ, ಸಿ.ಬಿ. ಈಶ್ವರಪ್ಪ, ಪ್ರಭು ದೊಡ್ಮನಿ, ಮುಖಂಡರಾದ ಡಾ. ಟಿ. ಬಸವರಾಜ್, ಜಿಗಳಿಯ ಇಂದೂಧರ್, ಗೌಡ್ರ ಬಸವರಾಜಪ್ಪ, ಪ್ರೊ. ಅಶೋಕ್ ಪಾಳ್ಯದ್, ಶಿವಮೊಗ್ಗದ ಡಾ. ಶೇಖರ್, ಶಿಕಾರಿಪುರದ ಮಹೇಂದ್ರ, ಹೊನ್ನಾಳಿಯ ಹುಡೇದ್, ಹಿಂಡಸಘಟ್ಟೆ ಮುರುಗೇಶಪ್ಪ, ಹಳ್ಳಿಹಾಳ್ ಪರಮೇಶ್ವರಪ್ಪ, ಬಂಡೇರ ತಿಮ್ಮಣ್ಣ, ಉಕ್ಕಡಗಾತ್ರಿ ಸುರೇಶ್, ಕೆ.ಪಿ. ಆಂಜನೇಯ ಪಾಟೀಲ್, ಉಪನ್ಯಾಸಕ ಹನುಮಗೌಡ, ನಂದಿತಾವರೆ ಮುರುಗೇಂದ್ರಯ್ಯ ಸೇರಿದಂತೆ, ಇನ್ನೂ ಅನೇಕರು ಸಭೆಯಲ್ಲಿ ಸಲಹೆಗಳನ್ನು ನೀಡಿದರು.

# ಮುಂಗಾರು ವಿಳಂಬ ಸಾಧ್ಯತೆ

## ಮಣ್ಣಿನ ತೇವಾಂಶ ಪ್ರಮಾಣ ಗಮನಿಸಿ ಬಿತ್ತನೆ ಕೈಗೊಳ್ಳಬೇಕು

**ಹೊನ್ನಾಳಿ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಎ.ಎಸ್. ಪ್ರತಿಮಾ ಸಲಹೆ**

ಹೊನ್ನಾಳಿ, ಜೂ. 6- ಮೇ ತಿಂಗಳಲ್ಲಿ ಸುರಿದ ಅಕಾಲಿಕ ಮಳೆಯ ಪರಿಣಾಮ ಮುಂಗಾರು ಮಳೆ ವಿಳಂಬ ಆಗುವ ಸಾಧ್ಯತೆ ಇದೆ. ಹಾಗಾಗಿ, ಮಳೆಯ ವಾತಾವರಣ, ಮಣ್ಣಿನ ತೇವಾಂಶದ ಪ್ರಮಾಣಗಳನ್ನು ಗಮನಿಸಿ ರೈತರು ಬಿತ್ತನೆ ಕಾರ್ಯ ಕೈಗೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕಿ ಎ.ಎಸ್. ಪ್ರತಿಮಾ ಹೇಳಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನಡೆದ ಮುಂಗಾರು ಹಂಗಾಮು ಪೂರ್ವ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು.

ಈಗ ಮಳೆಯಾಗಿದೆ. ತೇವಾಂಶ ಇದೆ ಎಂದು ಬಿತ್ತನೆ ಮಾಡಿದರೆ ಮುಂದಿನ ದಿನಗಳಲ್ಲಿ ಮುಂಗಾರು ಮಳೆ ಕೈಕೊಟ್ಟರೆ ಬೀಜಗಳ ಮೊಳಕೆ ಪ್ರಮಾಣ ಕುಂಠಿತವಾಗುತ್ತದೆ. ಒಂದು ವೇಳೆ ಮೊಳಕೆಯೊಡೆದರೂ ಮುಂದಿನ ಬೆಳವಣಿಗೆಗೆ ಅಗತ್ಯವಾದ ತೇವಾಂಶ ಕೊರತೆಯಾಗುವುದರಿಂದ ಉತ್ತಮ ಬೆಳೆ ಬರುವುದಿಲ್ಲ. ಆದ್ದರಿಂದ, ಬಿತ್ತನೆಗೆ ಮುನ್ನ ಈ ಎಲ್ಲಾ ಅಂಶಗಳನ್ನೂ ಪರಿಗಣಿಸಬೇಕು ಎಂದು ತಿಳಿಸಿದರು.

ಮೇ 27ಕ್ಕೆ ಮಾನ್ಸೂನ್ ಪ್ರವೇಶಿಸುತ್ತದೆ ಎಂದು ಈ ಮೊದಲು ಹವಾಮಾನ ಇಲಾಖೆ ಮಾಹಿತಿ ನೀಡಿತ್ತು. ಆದರೆ, ಮಾನ್ಸೂನ್ ಪ್ರವೇಶ ವಿಳಂಬವಾಗಿದ್ದು, ಜೂನ್ ಎರಡನೇ ವಾರಕ್ಕೆ ರಾಜ್ಯ ಪ್ರವೇಶಿಸುತ್ತದೆ ಎಂದು ತಿಳಿದುಬಂದಿದೆ. ಹಾಗಾಗಿ, ರೈತರು ಮಳೆಯ ವಾತಾವರಣ ನೋಡಿಕೊಂಡು ಬಿತ್ತನೆಗೆ ಮುಂದಾಗಬೇಕು ಎಂದು ಹೇಳಿದರು.

ಈ ಬಾರಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಅಧಿಕ ಪ್ರಮಾಣದಲ್ಲಿ ಸುರಿಯುತ್ತಿದೆ. ಕೆಲ ಬೆಳೆಗಳಿಗೆ ಹಾನಿಯಾಗಿದೆ. ಆದರೆ, ಅಡಿಕೆ ತೋಟಗಳು ಜಲಸಮೃದ್ಧಿ ಆಗಿವೆ. ಇದು ಸಂತಸದ ಸಂಗತಿ. ಮುಂಗಾರು ಬಿತ್ತನೆಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಮತ್ತಿತರೆ ಪರಿಕರಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯ ಇವೆ. ರೈತರು ಚಿಂತಿಸುವ ಅಗತ್ಯ ಇಲ್ಲ. ಹೆಚ್ಚಿನ ಮಾಹಿತಿಗಾಗಿ ಸಮೀಪದ ಕೃಷಿ ಸಂಪರ್ಕ ಕೇಂದ್ರಗಳು, ಇಲ್ಲವೇ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ವಿವರಿಸಿದರು.

ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿದರಗಡ್ಡೆ ಬಿ.ಎಚ್. ಜಯಪ್ಪ ಮಾತನಾಡಿ, ಅಸಾನಿ ಚಂಡಮಾರುತದ ಪರಿಣಾಮ ಸುರಿದ ನಿರಂತರ ಮಳೆ, ಬೀಸಿದ ಬಿರುಗಾಳಿಯಿಂದಾಗಿ ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಭತ್ತ, ಅಡಿಕೆ, ಬಾಳೆ, ಮೆಕ್ಕೆಜೋಳ ಮತ್ತಿತರೆ ಬೆಳೆಗಳು ಹಾಳಾಗಿದ್ದು, ಹಾನಿ ಅನುಭವಿಸಿದ ರೈತರಿಗೆ ಸರ್ಕಾರ ಶೀಘ್ರದಲ್ಲೇ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು. ಮಳೆ-ಗಾಳಿಯಿಂದಾಗಿ ಭತ್ತದ ಬೆಳೆ ನೆಲಕಚ್ಚಿದೆ. ಅಡಿಕೆ ಮರಗಳು ಬುಡಮೇಲಾಗಿ ಬಿದ್ದಿವೆ. ಬಾಳೆ ಬೆಳೆ ಸಂಪೂರ್ಣ ಹಾಳಾಗಿದ್ದು, ರೈತರು ತೀವ್ರ ನಷ್ಟ ಅನುಭವಿಸುತ್ತಿದ್ದಾರೆ. ತಕ್ಷಣ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಕೃಷಿಕ ಸಮಾಜದ ಉಪಾಧ್ಯಕ್ಷೆ ಆರುಂಡಿ ಎಲ್. ಜಯಮ್ಮ, ನಿರ್ದೇಶಕರಾದ ಜಿ.ಎಂ. ಸೋಮಶೇಖರಪ್ಪ, ನರಸಗೊಂಡನಹಳ್ಳಿ ಎನ್.ಪಿ. ಕೃಷ್ಣಮೂರ್ತಿ, ಉಜ್ಜನೀಪುರದ ಜಿ.ಆರ್. ಬಸವರಾಜ್, ಜಿಲ್ಲಾ ಪ್ರತಿನಿಧಿ ಚಿಕ್ಕಹಾಲಿವಾಣದ ಎಲ್. ರುದ್ರಾನಾಯ್ಕ ಹಾಗು ಇತರರು ಇದ್ದರು.

# ಯಕ್ಕನಹಳ್ಳಿ ಗ್ರಾ.ಪಂ.ಗೆ ಎರೇಹಳ್ಳಿ ದಿನೇಶ್ ಅಧ್ಯಕ್ಷ



ಹೊನ್ನಾಳಿ, ಜೂ.6- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಎರೇಹಳ್ಳಿ ವೈ.ಪಿ. ದಿನೇಶ್ ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ವೈ.ಕೆ. ದಯಾನಂದ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಯರೇಹಳ್ಳಿ ವೈ.ಪಿ. ದಿನೇಶ್ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ, ಭೂ ಸೇನಾ ನಿಗಮದ ಎಇಇ ಎಂ. ಗುರುಮೂರ್ತಿ ಅವಿರೋಧ ಆಯ್ಕೆ ಘೋಷಿಸಿದರು.

ಯಕ್ಕನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷೆ ಆರ್. ರಂಗಮ್ಮ, ಸದಸ್ಯರಾದ ವೈ.ಕೆ. ದಯಾನಂದ್, ಎಸ್.ಎಲ್. ಜಯದೇವಪ್ಪ, ಆರ್. ಮಂಜುಳ, ಅನಸೂಯಮ್ಮ, ಪವಿತ್ರ, ರಮೇಶನಾಯ್ಕ, ರೇಣುಕಮ್ಮ, ಪಿಡಿಒ ಎಸ್. ಎಚ್. ಶಿವಕುಮಾರ್, ಗೊಲ್ಲರಹಳ್ಳಿ ಜಿ.ಪಿ. ರಾಘವೇಂದ್ರ, ಯಕ್ಕನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷರಾದ ಎಸ್. ಬಸವರಾಜಪ್ಪ, ವಿನೋದಬಾಯಿ ಕೃಷ್ಣಾನಾಯ್ಕ, ಮಾಜಿ ಉಪಾಧ್ಯಕ್ಷ ಎನ್.ಎಂ. ವೀರೇಶ್, ಮುಖಂಡರಾದ ಸಿ.ಎನ್. ಹಾಲೇಶಪ್ಪ, ಬಿ. ಪ್ರಕಾಶ್, ಡಿ.ಎಂ. ಯಲ್ಲಪ್ಪ, ಯು.ಬಿ. ನಾಗರಾಜ್, ಬಿ. ಶಿವಲಿಂಗಪ್ಪ ಇತರರು ಇದ್ದರು.

## ರೈತ ವಿರೋಧಿ ಕಾಯ್ದೆಗಳ ಹಿಂಪಡೆಗೆ ಆಗ್ರಹ

**(1ನೇ ಪುಟದಿಂದ)** ಮಾಡಿದರು.

ರಾಜ್ಯ ಸರ್ಕಾರ ಕೂಡಲೇ ಅಕ್ರಮ ಸಕ್ರಮ ಸಮಿತಿಗಳು ಕಾರ್ಯಪ್ರವೃತ್ತರಾಗುವಂತೆ ಸೂಚನೆ ನೀಡಬೇಕು. ಸಮಿತಿ ರಚನೆ ಆಗದಿರುವಲ್ಲಿ ಶೀಘ್ರದಲ್ಲಿ ಅಕ್ರಮ ಸಕ್ರಮ ಸಮಿತಿ ರಚಿಸಬೇಕು. ರಾಷ್ಟ್ರೀಕೃತ ಬ್ಯಾಂಕ್ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ಸಣ್ಣ ಅತೀ ಸಣ್ಣ ರೈತರಿಗೆ ಶೇ. 20ರಷ್ಟು ಸಾಲವನ್ನು ಮೀಸಲಿಡಲು ಕಾನೂನು ರೂಪಿಸಬೇಕು. ಗ್ರಾಮೀಣ ಭಾಗದ ದುಡಿಯುವ ಸಣ್ಣ ಮತ್ತು ಅತೀ ಸಣ್ಣ ರೈತರು ಬಡವರ ಬ್ಯಾಂಕ್ ಉಳಿತಾಯ ಖಾತೆಯ ಹಣಕ್ಕೆ ಶೇಕಡಾ 8 ರಷ್ಟು ಬಡ್ಡಿಯನ್ನು ಬ್ಯಾಂಕ್‌ಗಳು ನೀಡಬೇಕು. ಇದಲ್ಲದೇ ಬ್ಯಾಂಕ್‌ಗಳಲ್ಲಿ 1000 ರೂ.ಗಳಿಗಿಂತ ಕಡಿಮೆ ಇರುವ ಹಣಕ್ಕೆ ಬ್ಯಾಂಕಿಂಗ್ ಸೇವಾ ವೆಚ್ಚವೆಂದು ಹಣವನ್ನು ಕಡಿತ ಮಾಡುವ ಪದ್ಧತಿಯನ್ನು ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಕೋರಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಮಂಡಳಿಯ ಐರಣಿ ಚಂದ್ರು, ಹಾಲೇಕಲ್ಲು ಸಿದ್ದೇಶ್, ದಾದಾಪೀರ್, ಐ.ಎಂ.ಅಣ್ಣಪ್ಪಸ್ವಾಮಿ, ಆವರಗೆರೆಯ ಕೆ.ಬಾನಪ್ಪ, ಚಂದ್ರು, ವಾಸು, ಎ.ತಿಪ್ಪೇಶ್, ಎಂ.ಬಿ.ಶಾರದಮ್ಮ, ವಿ.ಲಕ್ಷ್ಮಣ, ನರೇಗಾ ರಂಗನಾಥ ಸೇರಿದಂತೆ ಇತರರು ಭಾಗವಹಿಸಿದ್ದರು.

## ಕೋವಿಡ್ ಸಂಪೂರ್ಣ ನಿಯಂತ್ರಣ ; ಗಾಬರಿ ಬೇಡ

**(1ನೇ ಪುಟದಿಂದ)** ಪರಿಹಾರ ನಿಧಿಯಿಂದ 5 ಲಕ್ಷ ರೂ.ಗಳ ಪರಿಹಾರ ನೀಡುವುದಾಗಿ ಮುಖ್ಯ ಮಂತ್ರಿ ತಿಳಿಸಿದರು.

ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪ್ರಕರಣದ ಸಂಪೂರ್ಣ ತನಿಖೆ ಮಾಡಿ ತಾಂತ್ರಿಕ ವರದಿ ಸಲ್ಲಿಸುವಂತೆ ಕೆ. ಡಬ್ಲ್ಯೂ. ಎಸ್.ಎಸ್.ಬಿ ಮುಖ್ಯ ಇಂಜಿನಿಯರ್‌ಗೆ ಸೂಚಿಸ ಲಾಗಿದೆ. ರಾಯಚೂರಿನ ಎಲ್ಲಾ ವಾರ್ಡ್‌ಗಳ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಬೇಕು.

ಕುಡಿಯುವ ನೀರಿನ ಸುರಕ್ಷತೆಯ ಬಗ್ಗೆ ಪ್ರಮಾಣೀಕರಣವಾಗಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಅಧಿಕಾರಿಗಳ ಲೋಪದೋಷವಿದೆಯೇ ಎಂಬ ಬಗ್ಗೆಯೂ ಅಲ್ಲಿಯ ಡಿವೈಎಸ್ಪಿ ನೇತೃತ್ವದಲ್ಲಿ ಪೊಲೀಸ್ ತನಿಖೆಯನ್ನು ಕೂಡ ಕೈಗೊಳ್ಳ ಲಾಗುವುದು. ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

# ವಿಶ್ವಕರ್ಮ ಸಮಾಜಕ್ಕೆ ಪ್ರತ್ಯೇಕ ಗುರುಗಳ ನೇಮಕಕ್ಕೆ ಹರಿಹರದ ಸಮಾಜ ಸಹಮತ



ಹರಿಹರ, ಜೂ.6- ವಿಶ್ವಕರ್ಮ ಸಮಾಜದ ಪ್ರತ್ಯೇಕ ಗುರುಗಳನ್ನು ನೇಮಕ ಮಾಡುವುದಕ್ಕೆ ದಾವಣಗೆರೆ ಜಿಲ್ಲೆಯ ಅಧ್ಯಕ್ಷ ಬಸಾಪುರ ನಾಗೇಂದ್ರಚಾರ್ ಹಾಗೂ ಸಂಘದ ಪದಾಧಿಕಾರಿಗಳ ತೆಗೆದುಕೊಂಡ ತೀರ್ಮಾನಕ್ಕೆ ಹರಿಹರ ತಾಲ್ಲೂಕು ವಿಶ್ವಕರ್ಮ ಸಮಾಜದ ತಾಲ್ಲೂಕು ಘಟಕದ ಸಹಮತ ಇರುವುದಾಗಿ ಹರಿಹರ ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ರುದ್ರಚಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಹಾಲಿ ಇರುವ ವಿಶ್ವಕರ್ಮ ಸಮಾಜದ ಗುರುಗಳು ನಗರದಿಂದ ಬಹಳ ದೂರದ ನಗರದಲ್ಲಿ ಇರುವುದರಿಂದ ಇಲ್ಲಿನ ವಿಶ್ವಕರ್ಮ ಸಮಾಜದ ವತಿಯಿಂದ ನಡೆಯುವ ಅನೇಕ ಸಭೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗದೇ ಇರುವುದರಿಂದ ಇಲ್ಲಿನ ಬಹುತೇಕ ಸಮಾಜದ ಭಕ್ತರಿಗೆ ನಿರಾಸೆ ತರಿಸುತ್ತಿದೆ. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಯ ಸಮಾಜದ ವತಿಯಿಂದ ನಡೆದ ವಿಶ್ವಕರ್ಮ ಸಮಾಜದ ಸಭೆಯಲ್ಲಿ ಸರ್ವ ಪದಾಧಿಕಾರಿಗಳ ಸಮ್ಮುಖದಲ್ಲಿ ದಾವಣಗೆರೆಗೆ ಪ್ರತ್ಯೇಕ ವಿಶ್ವಕರ್ಮ ಗುರುಗಳನ್ನು ನೇಮಕ ಮಾಡಲು ತೆಗೆದುಕೊಂಡ ನಿರ್ಧಾರಕ್ಕೆ ಹರಿಹರ ತಾಲ್ಲೂಕು ಶ್ರೀ ಕಾಳಿಕಾಂಬಾ ಹಾಗೂ ಗುರುಮೌನೇಶ್ವರ ಸೇವಾ ಸಮಿತಿಯ ತಾಲ್ಲೂಕು ಘಟಕದ ಸಹಮತವಿದೆ ಎಂದು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಡಿ.ಪಿ. ರಾಜಾಚಾರ್, ಕಾರ್ಯದರ್ಶಿ ಬಿ.ಎಸ್. ನಾಗರಾಜಚಾರ್, ಸಹ ಕಾರ್ಯದರ್ಶಿ ವೀರಚಾರ್, ಎಸ್. ಮೌನೇಶ್ವರಚಾರ್, ಗಂಗಾಧರಚಾರ್, ಬ್ರಹ್ಮದೇವಾಚಾರ್, ಓಂಕಾರಚಾರ್, ಲಕ್ಮಣಚಾರ್, ಪ್ರಕಾಶಚಾರ್, ಮಲೆಬೆನ್ನೂರು ಶ್ರೀನಿವಾಸಚಾರ್, ಮೇಘಚಾರ್, ಶಾಂತಚಾರ್ ಸೇರಿದಂತೆ ಇತರರು ಹಾಜರಿದ್ದರು.

# ಮೌಲ್ಯಗಳು ನಮ್ಮ ಬದುಕಿನ ಆಸ್ತಿ : ಮುರುಗೇಂದ್ರಯ್ಯ

**ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ತಾಲ್ಲೂಕು ಕಸಾಪ ದಿಂದ ದತ್ತಿ ಉಪನ್ಯಾಸ ಕಾರ್ಯಕ್ರಮ**



ದಾವಣಗೆರೆ, ಜೂ.6- ಸಂಸ್ಕಾರ ಮತ್ತು ಸಂಸ್ಕೃತಿಯಿಂದ ಮೌಲ್ಯಗಳು ಪ್ರತಿಬಿಂಬಿಸುತ್ತವೆ. ಮೌಲ್ಯಯುತ ಜೀವನ, ಸಮಾಜ ಮುಖಿ ಸಮಾಜಕ್ಕೆ ಹಿತವಾದದ್ದು. ಸಹಕಾರ, ಸಹಿಷ್ಣುತೆ, ಸಹಾಯ, ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ತಾಳ್ಮೆ ಅನುಕಂಪ, ಸತ್ಯ, ನೀತಿ-ನಿಯಮ, ಶಿಸ್ತು, ಆದರ್ಶ ಇವುಗಳೇ ಮಾನವೀಯ ಮೌಲ್ಯಗಳು. ಈ ಮಾನವೀಯ ಮೌಲ್ಯಗಳು ನಮ್ಮ ಬದುಕಿಗೆ ಪುಷ್ಟಿಯನ್ನು ನೀಡಬಲ್ಲವು, ಮೌಲ್ಯಗಳೇ ನಮ್ಮ ಬದುಕಿನ ಆಸ್ತಿ ಎಂದು ಮ.ಗು. ಮುರುಗೇಂದ್ರಯ್ಯ ನುಡಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ದತ್ತಿ ಕಾರ್ಯಕ್ರಮದಲ್ಲಿ 'ಬದುಕು ಮತ್ತು ಸಾಮಾಜಿಕ ಮೌಲ್ಯಗಳು' ವಿಷಯ ಕುರಿತು ಅವರು ಮಾತನಾಡಿದರು.

ಆರೋಗ್ಯ ಕಳೆದುಕೊಂಡರೆ ವೈದ್ಯರ ಬಳಿ ಸರಿಪಡಿಸಿಕೊಳ್ಳಬಹುದು. ಸಂಪತ್ತು ಕಳೆದುಕೊಂಡರೆ ಮತ್ತೆ ಸಂಪಾದಿಸಿಕೊಳ್ಳಬಹುದು.ಆದರೆ ನಡೆ ನುಡಿ ಕಳೆದುಕೊಂಡರೆ ಸರಿಪಡಿಸಿಕೊಳ್ಳಲು ಆಗುವುದಿಲ್ಲ ಎಂದು ತಿಳಿಸಿದರು.

'ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಹರೆಯು, ಮಾತಿನಿಂ ಸಕಲ ಸಂಪದವು, ಮಾತೇ ಮಾಣಿಕ್ಯ' ಎಂಬ ಸರ್ವಜ್ಞನ ವಚನವನ್ನು ಉದಾಹರಿಸುತ್ತಾ, ಮಾತು ನಮ್ಮ ನಡೆ-ನುಡಿಯನ್ನು ಪ್ರತಿಬಿಂಬಿಸುತ್ತದೆ. ಮಾತು ಸಕಲರಿಗೂ ಆಸ್ವಾದಿಸುವಂತೆ ಇರಬೇಕು ಎಂದು ಮಾತಿನ ಮೌಲ್ಯ ತಿಳಿಸಿದರು.

ಹಿರಿಯರ ಬದುಕು ಒಂದು ಮೌಲ್ಯಯುತವಾದದ್ದು. ಮನುಷ್ಯನ ಹಠ ಚಟ ಬದುಕನ್ನೇ ಹಾಳು ಮಾಡುತ್ತದೆ. ಇದರಿಂದ ಹೊರಬರಲು ಶಿಕ್ಷಣ ಒಂದು ಅದ್ಭುತವಾದ ಮಾರ್ಗವೆಂದು ತಿಳಿಸಿದರು. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ಕರ್ನಾಟಕದಲ್ಲಿ ಸಾರ್ವಭೌಮವಾದದ್ದು ಅದು ನಮ್ಮ ಉಸಿರು. ಅದನ್ನು ನಾವು ಉಳಿಸಿ, ಬೆಳೆಸಿಕೊಂಡು ಹೋಗಬೇಕಾಗಿದೆ. ನಾವು ದಿನನಿತ್ಯದ ನಮ್ಮ ಬದುಕಿನಲ್ಲಿ ಸಹಜವಾಗಿ ಕನ್ನಡದಲ್ಲಿ ಮಾತನಾಡುವುದು, ವ್ಯವಹರಿಸುವುದು, ಬರೆಯುವುದು ಲೆಕ್ಕ ಮಾಡುವುದು, ಓದುವುದು.

ಹೀಗೆ ನಾವುಗಳು ಕನ್ನಡವನ್ನು ಅನುಪಾಲನೆ ಮಾಡುತ್ತಾ ಹೋದಲ್ಲಿ ಕನ್ನಡ ಎಂದೆಂದಿಗೂ ಅಜರಾಮ ರವಾಗಿ ಇರುತ್ತದೆ ಎಂದು ಮುರುಗೇಂದ್ರಯ್ಯ ನವರು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದತ್ತಿ ದಾನಿಗಳಾದ ಕೆ.ಜಿ ವೇದಮೂರ್ತಿ ಗೌಡ್ರು ಮಾತನಾಡಿ, ಶಾಲಾ ಮಕ್ಕಳಿಗೆ ಪ್ರತಿ ವರ್ಷ ಆಂಗ್ಲ ಮಾಧ್ಯಮ ಪದಕೋಶವನ್ನು ವಿತರಿಸುತ್ತಿದ್ದು, ಅದನ್ನು ಈ ವರ್ಷವೂ ಮುಂದುವರೆಸಿಕೊಂಡು ಹೋಗುವುದಾಗಿ ತಿಳಿಸಿದರು ಹಾಗೂ ಮತ್ತೋರ್ವ ದತ್ತಿ ದಾನಿಗಳಾದ ಬಿಎಂ ಮುರುಗಯ್ಯ ಮಾತನಾಡಿದರು.

ಕುರ್ಕಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಆರ್. ಗಣೇಶಾಚಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉದ್ಘಾಟನೆಯನ್ನು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೆ. ಓಂಕಾರಪ್ಪ ನೆರವೇರಿಸಿದರು.

ತಾಲ್ಲೂಕು ಕಸಾಪ ಪದಾಧಿಕಾರಿ ಎ.ಎಂ. ಸಿದ್ದೇಶ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ದತ್ತಿ ದಾನಿಗಳನ್ನು ಸ್ಮರಿಸಿಕೊಂಡರು.

ಇದೇ ಸಂದರ್ಭದಲ್ಲಿ ಇವರು ಶಾಲಾ ಮಕ್ಕಳಿಗೆ ನಾ. ಸೋಮೇಶ್ವರ ಅವರು ಬರೆದ ಕಲಿಕೆ ಓದು ನೆನಪು ಪುಸ್ತಕವನ್ನು ಕೊಡುಗೆಯಾಗಿ ನೀಡಿದರು.

ಎಸ್ಡಿಎಂಸಿ ಸದಸ್ಯರಾದ ಕೆ ಜೆ ನಾಗರಾಜ ಮತ್ತು ಇತರರು ಉಪಸ್ಥಿತರಿದ್ದರು. ಕು. ಬಿಂದುಶ್ರೀ ಪ್ರಾರ್ಥಿಸಿದರು. ಶಿಕ್ಷಕ ಎಚ್. ವಿರುಪಾಕ್ಷಿ ಸ್ವಾಗತಿಸಿದರು. ಶ್ರೀಮತಿ ಎಸ್ ಪಾರ್ವತಮ್ಮ ಕಾರ್ಯಕ್ರಮ ನಿರೂಪಿಸಿದರು. ಅಧ್ಯಾಪಕ ಸಿ. ಜಿ. ಜಗದೀಶ್ ಕೂಲಂಬಿ ವಂದಿಸಿದರು.

# ಸಂತಪೌಲರ ಸಂಸ್ಥೆ ಹಳೆಯ ವಿದ್ಯಾರ್ಥಿಗಳ ಸಂಘದಿಂದ ವಿವಿಧ ಕಾರ್ಯಕ್ರಮಗಳು

ದಾವಣಗೆರೆ, ಜೂ.6- ನಗರದ ಪಿ.ಜೆ. ಬಡಾವಣೆಯಲ್ಲಿರುವ ಸಂತ ಪೌಲರ ಕಾನ್ವೆಂಟ್ ಶೈಕ್ಷಣಿಕ ಸಂಸ್ಥೆಯು 75ನೇ ವರ್ಷದ ಅಮೃತ ಮಹೋತ್ಸವ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದಿಂದ ವಿವಿಧ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿರುವುದಾಗಿ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಈ ಸಂಬಂಧ ವಾಗಿ ಈಗಾಗಲೇ ಸಭೆ ನಡೆಸಿ, ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಇದೇ 18 ರಂದು ನೃತ್ಯ ಸ್ಪರ್ಧೆ ಹಾಗೂ 25ಕ್ಕೆ ಹಳೆಯ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಜುಲೈ ಮೊದಲ ವಾರದಲ್ಲಿ ಉಚಿತ ಆರೋಗ್ಯ ತಪಾಸಣೆ, ಆಗಸ್ಟ್ ಮೊದಲ ವಾರದಲ್ಲಿ ಪರಿಸರದೆಡೆಗೆ ನಡೆ ಕಾರ್ಯಕ್ರಮಗಳನ್ನು ಆಯೋಜಿ ಸಿದ್ದು, ಆಗಸ್ಟ್ 20 ಹಾಗೂ 21ರಂದು ಗುರುವಂದನೆ ಸೇರಿದಂತೆ ಅಂತಿಮ ಘಟ್ಟದ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮಗಳು ಕೇವಲ ಒಂದು ವರ್ಷಕ್ಕೆ ಸೀಮಿತವಾಗದೆ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಪ್ರತಿ ವರ್ಷವೂ ಆಯೋಜಿಸಲಾಗುವುದು ಎಂದು ಹೇಳಿದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿ ಗಳು ಕಾರ್ಯಕ್ರಮಗಳಲ್ಲಿ ಭಾಗವಹಿ ಸಲು ಮೊ. 9844706727, 9110274638, 87224 87873 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಸಂಘದ ಕಾರ್ಯದರ್ಶಿ ಕು.ಜಯಮ್ಮ ಮಾತನಾಡಿ, ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಹೊರ ರಾಜ್ಯ ಹಾಗೂ ಹೊರ ದೇಶಗಳಲ್ಲೂ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಕೊರೊನಾ ಸಮಯ ದಲ್ಲಿ ಆರ್ಥಿಕವಾಗಿ ದುರ್ಬಲರಾದ 75 ವಿದ್ಯಾರ್ಥಿಗಳಿಗೆ ನೆರವು ನೀಡಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಕೆ. ಮಂಜುಳಾ, ಸಿ.ಸಿ. ಜೆಸ್ಸಿ, ಲಲಿತಾ ಚಾವ್ಲಾ, ರವಿ ಇತರರು ಉಪಸ್ಥಿತರಿದ್ದರು.

# ಕಂಚಿಕೇರಿಯನ್ನು ಜಿ.ಪಂ. ಕ್ಷೇತ್ರ ಮಾಡಲು ಒತ್ತಾಯಿಸಿ ರಸ್ತೆ ತಡೆ



ಹರಪನಹಳ್ಳಿ, ಜೂ.6- ಕಂಚಿಕೇರಿ ಗ್ರಾಮವನ್ನು ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಮಾಡುವಂತೆ ಒತ್ತಾಯಿಸಿ ಹಳ್ಳಿಕೇರಿ, ಕಂಚಿಕೇರಿ, ಕೋಡಿ ತಾಂಡಾ, ಹಳ್ಳಿಕೇರಿ ಕ್ಯಾಂಪ್, ವಡೇರಹಳ್ಳಿ, ಕೊರಚರಹಟ್ಟಿ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಬೆಂಡಿಗೇರಿ, ಅರಸೀಕೇರಿ, ದಾವಣಗೆರೆ ಮುಖ್ಯ ರಸ್ತೆ ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಿ, ವಿಜಯನಗರಕ್ಕೆ ತೆರಳಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಡಾ. ಬಿದರಿ ಕೊಟ್ರೇಶ್ ಮಾತನಾಡಿ, ಕಂಚಿಕೇರಿ ಗ್ರಾಮ ಭೌಗೋಳಿಕವಾಗಿ ಅಂಕಿ-ಸಂಖ್ಯೆಯಲ್ಲಿ ಬಹುದೊಡ್ಡ ಗ್ರಾಮವಾಗಿದ್ದು, 6 ಸಾವಿರ ಮತದಾರರಿದ್ದಾರೆ. 12 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಕಾಲೇಜು ಇದ್ದು ಸುಸಜ್ಜಿತವಾದ ಗ್ರಾಮ ಪಂಚಾಯಿತಿ, ಸರ್ಕಾರಿ ಆಸ್ಪತ್ರೆ, ಐತಿಹಾಸಿಕ ದೇವಸ್ಥಾನಗಳು ಈ ಗ್ರಾಮದಲ್ಲಿವೆ ಎಂದರು.

ತಾ.ಪಂ.ಮಾಜಿ ಅಧ್ಯಕ್ಷ ಎಚ್.ರಾಜಪ್ಪ, ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಬಿ. ಅಂಜಿನಪ್ಪ ಮಾತನಾಡಿ, ಕಂಚಿಕೇರಿ ಜಿ.ಪಂ. ಕ್ಷೇತ್ರಕ್ಕೆ ಯಡಿಹಳ್ಳಿ, ಗುಂಡಗತ್ತಿ, ತೌಡೂರು ಪಂಚಾಯಿತಿಗಳನ್ನು ಸೇರಿಸಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಕೇಂದ್ರೀಕರಿಸಿತ್ತು. ನಂತರದಲ್ಲಿ ಯಡಿಹಳ್ಳಿ ಮತ್ತು ಗುಂಡಗತ್ತಿ ಪಂಚಾಯಿತಿಗಳನ್ನು ಬಿಟ್ಟು ಕಂಚಿಕೇರಿ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ತೌಡೂರು, ಅಣಜಿಗೇರಿ, ಮಾದಿಹಳ್ಳಿ ಪಂಚಾಯಿತಿ ಸೇರಿಸಿ ಕಂಚಿಕೇರಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಕೇಂದ್ರೀಕರಿಸಿತ್ತು ಎಂದು ಹೇಳಿದರು.

ಆದರೆ ಇತ್ತೀಚಿನ ದಿನಗಳಲ್ಲಿ ಅನಿರ್ದಿಷ್ಟ, ಅಸಂಬದ್ಧ ಹಾಗೂ ಅವೈಜ್ಞಾನಿಕ ತೀರ್ಮಾನಗಳು ಹಾಗೂ ವಿಚಾರಗಳನ್ನು ಒಳಗೊಂಡು ಕಂಚಿಕೇರಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ತೆಗೆದು ಹೊಸದಾಗಿ ಹಿರೇಮೇಗಳಗೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಕೇಂದ್ರೀಕರಿಸಿದ್ದು ಸರಿಯಲ್ಲ ಎಂದು ಕಿಡಿಕಾರಿದರು.

ಪ್ರಸ್ತುತ ಕಂಚಿಕೇರಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳನ್ನು ಕಂಚಿಕೇರಿಯನ್ನು ಉಚ್ಚಂಗಿದುರ್ಗ ಜಿಲ್ಲಾ ಪಂಚಾಯಿತಿಗೆ ಸೇರಿಸುವ ಅವೈಜ್ಞಾನಿಕ ತೀರ್ಮಾನ ಸರಿಯಲ್ಲ. ಆದ್ದರಿಂದ ಕಳೆದ 15 ವರ್ಷಗಳಿಂದ ಜಿಲ್ಲಾ ಪಂಚಾಯಿತಿ ಕ್ಷೇತ್ರವಾಗಿರುವ ಕಂಚಿಕೇರಿಯನ್ನೇ ಜಿಲ್ಲಾ ಪಂಚಾಯಿತಿಯನ್ನಾಗಿ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಂಚಿಕೇರಿಯಿಂದ ಹರಪನಹಳ್ಳಿ ಯವರೆಗೆ ಪಾದಯಾತ್ರೆ ಮೂಲಕ ವಿನೂತನ ಪ್ರತಿಭಟನೆ ಮಾಡಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಸಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ರೆಡ್ಡಿ ಶಾಂತಕುಮಾರ್ ಮಾತನಾಡಿ, ಹಾಲಿ ಇರುವ ಕಂಚಿಕೇರಿ ಜಿಲ್ಲಾ ಪಂಚಾಯಿತಿಯನ್ನು ತೆಗೆದು ಇನ್ನೊಂದು ಜಿಲ್ಲಾ ಪಂಚಾಯಿತಿಗೆ ಸೇರಿಸುವಾಗ ಸ್ಥಳೀಯ ಮುಖಂಡರಿಗೆ, ಸ್ಥಳೀಯ ಪ್ರಜೆಗಳಿಗೆ ತಿಳಿಸಿ ಕ್ಷೇತ್ರ ಮರು ವಿಂಗಡಣೆ ಮಾಡಬೇಕೆಂಬ ನಿಯಮ ಇದ್ದರು ಕೂಡ ಆ ನಿಯಮವನ್ನು ಗಾಳಿಗೆ ತೂರಿ ಕಂಚಿಕೇರಿ ಜಿಲ್ಲಾ ಪಂಚಾಯಿತಿಯನ್ನು ತೆಗೆದಿರುವುದು ಸರಿಯಾದ ನಿರ್ಧಾರವಲ್ಲ. ಆದ್ದರಿಂದ ಸರ್ಕಾರ ಈ ಕೂಡಲೇ ಯಥಾವತ್ತಾಗಿ ಕಂಚಿಕೇರಿ ಜಿಲ್ಲಾ ಪಂಚಾಯಿತಿಯನ್ನು ಇಲ್ಲೇ ಉಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ತಾ.ಪಂ.ಮಾಜಿ ಸದಸ್ಯರಾದ ಕಂಚಿಕೇರಿ ಜಯಲಕ್ಷ್ಮಿ, ವೀರಣ್ಣ, ನ್ಯಾಯವಾದಿ ಹಲಗೇರಿ ಮಂಜಪ್ಪ, ಕಂಚಿಕೇರಿ ಗ್ರಾ.ಪಂ. ಅಧ್ಯಕ್ಷರಾದ ರೇಣುಕಮ್ಮ ನಾಗರಾಜ್, ಮಾಜಿ ಅಧ್ಯಕ್ಷರಾದ ಪಾಟೀಲ್ ಕೆಂಚನಗೌಡ್ರು. ಕೆ.ಪಿ.ಬಸವರಾಜಪ್ಪ. ಗಂಗನರಸಿ ನಾಗರಾಜಪ್ಪ. ಮುಖಂಡರಾದ ಸುನಿಲ್ ಕುಮಾರ್ ಬಿದ್ರಿ, ಸದ್ಯೋಜಾತಪ್ಪ, ಕೋಟ್ರೇಶ, ಭೋವಿ ಚಿನ್ನಪ್ಪ, ಕೆ.ಸಿ.ಶಿವಕುಮಾರ್, ಈಡಿಗರ ವೆಂಕಟೇಶ್, ಪೂಜಾರ್ ಮಂಜುನಾಥ, ಕೆಂಚಪ್ಪ, ಜಿ.ಎಂ. ಕರಿಬಸವಯ್ಯ, ಜೋಗಪ್ಪರ ಬಸಪ್ಪ, ಮಂಜಪ್ಪ, ಭೀಮಪ್ಪ, ವೈ.ಅಂಜಿನಪ್ಪ, ಜ್ಯೋತೆಪ್ಪ, ಕೆ.ಹನುಮಂತಪ್ಪ, ಹಾಲಾಳ ಹನುಮಂತಪ್ಪ, ಗಂಗನರಸಿ ನಾಗರಾಜ, ಅಂಜಿನಪ್ಪ, ಹನುಮಂತಪ್ಪ, ಬಸಪ್ಪ, ಸಿದ್ದಪ್ಪ ಸೇರಿದಂತೆ, ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಸಿದ್ಧತೆಗೆ ಸೂಚನೆ



ದಾವಣಗೆರೆ, ಜೂ.6 - ಜೂನ್ 12 ರಂದು ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಆಯೋಜಿಸಲು ವ್ಯವಸ್ಥಿತವಾಗಿ ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂನ್ 12 ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಹಮ್ಮಿಕೊಳ್ಳಬೇಕು. ವಿದ್ಯಾರ್ಥಿಗಳು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಾಥಾ ಸೇರಿದಂತೆ ಬಾಲ ಕಾರ್ಮಿಕ ಪದ್ಧತಿ ಕುರಿತು ಸಮಾರಂಭ ಏರ್ಪಡಿಸಲು ಸಿದ್ಧತೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ಕಡಿವಾಣಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ಬಾಲ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟಲು ಅಧಿಕಾರಿಗಳು ಸಾರ್ವಜನಿಕರ ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಕಾರ್ಯ ನಿರ್ವಹಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮದಲ್ಲಿ ಹೋಟೆಲ್ ಮಾಲೀಕರು, ಗ್ಯಾರೇಜ್ ಮಾಲೀಕರು ಪಾಲ್ಗೊಳ್ಳುವಂತೆ ಮಾಡಿ, ಅವರಿಗೆ ಬಾಲ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುವುದು ಅಪರಾಧ ಎಂಬುದರ ಬಗ್ಗೆ ತಿಳಿಸಿ ಕೊಡಬೇಕು ಎಂದರು.

ಸಹಾಯಕ ಕಾರ್ಮಿಕ ಆಯುಕ್ತರಾದ ಎಸ್.ಆರ್ ವೀಣಾ ಮಾತನಾಡಿ, ಜೂನ್ 12 ರಂದು ಬೆ.9 ಗಂಟೆಗೆ ಜಾಗೃತಿ ಜಾಥಾ ನಡೆಸಿ, ನಂತರ ವೇದಿಕೆ ಕಾರ್ಯಕ್ರಮದ ನಡೆಯಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ಡಿವೈಎಸ್ಪಿ ನರಸಿಂಹ ವಿ ತಾಮ್ರಧ್ವಜ, ಡಿ.ಎಚ್.ಒ ಡಾ. ನಾಗರಾಜ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಡಿಡಿಪಿಐ ತಿಪ್ಪೇಶಪ್ಪ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರೇಷ್ಮಾ ಕೌಸರ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜಾನಾಯಕ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಮಿತ್ ಬಿದರಿ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಈ. ರಮೇಶ್, ಬಾಲ ಕಾರ್ಮಿಕ ಪದ್ದತಿ ನಿರ್ಮೂಲನೆ ಯೋಜನಾ ನಿರ್ದೇಶಕ ಪ್ರಸನ್ನ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ರಾಣೇಬೆನ್ನೂರು: ವಾಹನ ಸವಾರರು ಪಾದಚಾರಿಗಳಿಗೆ ಸುರಕ್ಷತಾ ಪಾಠ



ರಾಣೇಬೆನ್ನೂರು, ಜೂ. 6- ರೈಲು ಗಾಡಿ ಬರುವಾಗ ಹಳಿ ದಾಟದಂತೆ, ಕಿವಿಗೆ ಯಾವುದೇ ಸಾಧನಗಳನ್ನು ಧರಿಸದಂತೆ ಹಾಗೂ ಸುರಕ್ಷತೆಯ ಸಂಚಾರದ ಬಗ್ಗೆ ತಾಲ್ಲೂಕಿನ ದೇವರಗುಡ್ಡ ಗ್ರಾಮದ ರೈಲ್ವೆ ಗೇಟ್ ಬಳಿ ಇಂದು ವಾಹನ ಸಂಚಾರಿ ಹಾಗೂ ಪಾದಚಾರಿಗಳಿಗೆ ಧ್ವನಿವರ್ಧಕದ ಮೂಲಕ ತಿಳಿವಳಿಕೆ ನೀಡಲಾಯಿತು ಎಂದು ರಾಣೇಬೆನ್ನೂರು ರೈಲ್ವೆ ಪೊಲೀಸ್ ಅಧಿಕಾರಿ ಆರ್. ಎಚ್. ಗುಳೇದ ತಿಳಿಸಿದ್ದಾರೆ.

## ಸಂಚಾರಿ ಪೊಲೀಸ್ ಠಾಣೆಯಲ್ಲಿ ಲಂಚಾವತಾರ, ಕ್ರಮಕ್ಕೆ ಆಗ್ರಹ

ದಾವಣಗೆರೆ, ಜೂ.6- ನಗರದ ದಕ್ಷಿಣ ವಲಯ ಸಂಚಾರಿ ಪೊಲೀಸ್ ಠಾಣೆಯ ಪೊಲೀಸರು ಬಡ ಆಟೋ ಚಾಲಕರ ಬಳಿ ಗೂಗಲ್ ಪೇ ಹಾಗೂ ಫೋನ್ ಪೇ ಮೂಲಕವೇ ತಿಂಗಳ ಮಾಮೂಲಿ ವಸೂಲಿ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದೆ.

ಪೊಲೀಸರು ಮಾಮೂಲು ವಸೂಲಿಗೆ 'ಮುಂಗಾರು ಮಳೆ' ಎಂಬ ಕೋಡ್ ಬಳಸುತ್ತಿದ್ದಾರೆ. ಈ ತಿಂಗಳ 'ಮುಂಗಾರು ಮಳೆ' ಬಂದಿಲ್ಲ ಎಂದು ಆಟೋ ಚಾಲಕರನ್ನು ಪ್ರಶ್ನಿಸಿ ವಸೂಲಿ ಮಾಡುತ್ತಿದ್ದಾರೆ ಎಂದು ಪಕ್ಷದ ಜಿಲ್ಲಾ ಯುವ ಘಟಕದ ಅಧ್ಯಕ್ಷ ಡಿ.ಜಿ. ಮಾಲತೇಶ್ ದೂರಿದರು.

ಈ ಹಿಂದೆ ವಸೂಲಿ ದಂಧೆಗೆ ಸಂಬಂಧಿಸಿದಂತೆ ಸಂಚಾರಿ ಠಾಣೆ ಎದುರು ಪ್ರತಿಭಟನೆ ಮಾಡಿದ್ದರೂ, ಸಿಬ್ಬಂದಿಯ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಠಾಣೆಯ ಪೇದೆಯೊಬ್ಬರು ಗೂಗಲ್ ಪೇ ಮೂಲಕ ಮಾಮೂಲಿ ವಸೂಲಿ ಮಾಡಿರುವುದನ್ನು ಸಾಕ್ಷಿ ಸಹಿತ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದೇವೆ ಎಂದು ಹೇಳಿದರು.

ಫುಟ್‌ಪಾತ್ ಮೇಲಿನ ತಿಂಡಿ ಗಾಡಿಗಳಿಂದ ಪೊಲೀಸರು ಭಿಕ್ಷಾಟನೆ ರೀತಿಯಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆ. ನಗರದಲ್ಲಿ ಪುಡಿ ರೌಡಿಗಳ ಹಾವಳಿ ಹೆಚ್ಚಾಗಿದೆ. ಇಲಾಖೆಯಲ್ಲಿ ಲೂಟಿತನ ಮಿತಿ ಮೀರಿದೆ. ದೂರು ನೀಡಿದವರ ಮೇಲೆಯೇ ಬೆದರಿಕೆ ಹಾಕುವ ಪ್ರವೃತ್ತಿ ಹೆಚ್ಚಾಗಿದೆ. ಹಿರಿಯ ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕಬೇಕು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಟಿ. ಅಜ್ಜೇಶ್, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಧ್ಯಕ್ಷ ಎಂ.ಹೆಚ್. ರಾಜು, ಕಾರ್ಯದರ್ಶಿ ಗಿರೀಶ್, ಜಿಲ್ಲಾ ಯುವ ಘಟಕದ ಉಪಾಧ್ಯಕ್ಷ ಎನ್.ಎಸ್. ಅಭೇಷ್ಕ, ವೃಷಭೇಂದ್ರಾಚಾರ್ ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಭಾನುವಾರ 29.3 ಮಿ.ಮೀ ಮಳೆ

ದಾವಣಗೆರೆ, ಜೂ. 6- ಜಿಲ್ಲೆಯಲ್ಲಿ ದಿನಾಂಕ 5 ರಂದು 29.3 ಮಿ.ಮೀ. ಸರಾಸರಿ ಮಳೆಯಾಗಿದ್ದು. 6.90 ಲಕ್ಷ ರೂ ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿಯಲ್ಲಿ 23.2 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ 16.4 ಮಿ.ಮೀ, ಹರಿಹರದಲ್ಲಿ 14.9 ಮಿ.ಮೀ, ಹೊನ್ನಾಳಿ 40.0 ಮಿ.ಮೀ, ಜಗಳೂರು 40.2 ಮಿ.ಮೀ, ನ್ಯಾಮತಿಯಲ್ಲಿ 40.6 ಮಿ.ಮೀ ಮಳೆಯಾಗಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 2 ಕಚ್ಚಾ ಮನೆಗಳಿಗೆ ಭಾಗಶ: ಹಾನಿಯಾಗಿದ್ದು, ರೂ. 0.60 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ 2 ಪಕ್ಕಾ ಮನೆಗಳಿಗೆ ಭಾಗಶ: ಹಾನಿಯಾಗಿದ್ದು, 1.50 ಲಕ್ಷ, 2 ಕಚ್ಚಾ ಮನೆಗಳಿಗೆ ಭಾಗಶ: ಹಾನಿಯಾಗಿದ್ದು, 1.00 ಲಕ್ಷ ಮತ್ತು ಒಂದು ದನದ ಕೊಟ್ಟಿಗೆ ಹಾನಿಯಾಗಿದ್ದು, 0.50 ಲಕ್ಷ ಒಟ್ಟು 3.00 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಚ್ಚಾ ಮನೆಗಳಿಗೆ ಭಾಗಶ: ಹಾನಿಯಾಗಿದ್ದು, 0.50 ಲಕ್ಷ ಮತ್ತು 0-10 ಗುಂಟೆ ಅಡಿಕೆ ಬೆಳೆ ಹಾನಿಯಾಗಿದ್ದು, 0.30 ಲಕ್ಷ ಒಟ್ಟು 0.80 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ 7 ಕಚ್ಚಾಮನೆ ಭಾಗಶಃ ಹಾನಿಯಾಗಿದ್ದು, 2.50 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ

ಜಿಲ್ಲೆಯಲ್ಲಿ ಒಟ್ಟಾರೆ 6.90 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ಡೊಮಿನಿಕನ್ ರಿಪಬ್ಲಿಕ್ ರಾಯಭಾರಿ ರಾಜ್ಯಕ್ಕೆ ಭೇಟಿ

ಬೆಂಗಳೂರು, ಜೂ.6 - ಭಾರತದಲ್ಲಿ ಡೊಮಿನಿಕನ್ ರಿಪಬ್ಲಿಕ್ ರಾಯಭಾರಿ ಡೇವಿಡ್ ಇಮ್ಯಾನುವೆಲ್ ಪುಯಿಗ್ ಬುಚೆಲ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ ವಿವಿಧ ವಿಷಯಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಡೊಮಿನಿಕನ್ ರಿಪಬ್ಲಿಕ್ ದೇಶವು ಕರ್ನಾಟಕದೊಂದಿಗೆ ಮಾಹಿತಿ ತಂತ್ರಜ್ಞಾನ, ಉನ್ನತ ಶಿಕ್ಷಣ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಸ್ಟಾರ್ಟಪ್ ಮತ್ತಿತರೆ ಕ್ಷೇತ್ರಗಳಲ್ಲಿ ಸಹಯೋಗ ಹೊಂದಲು ಆಸಕ್ತಿ ವಹಿಸಿದೆ ಎಂದು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಮಾಹಿತಿ ತಂತ್ರಜ್ಞಾನ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಸ್ಟಾರ್ಟಪ್, ವಿದ್ಯುತ್ ವಾಹನಗಳು ಮತ್ತಿತರೆ ವಲಯಗಳಿಗೆ ರಾಜ್ಯವು ನಿರ್ದಿಷ್ಟ ನೀತಿ ಹೊಂದಿದೆ. ಡೊಮಿನಿಕನ್ ರಿಪಬ್ಲಿಕ್ ಕೂಡ ಇಂತಹ ನೀತಿ ರೂಪಿಸಲು ಸಹಕಾರ ನೀಡಲಾಗುವುದು ಎಂದರು.

## ಎಸ್‌ಡಿಎಂಸಿ ಅಧ್ಯಕ್ಷರಾಗಿ ರಮೇಶ್ ಆಯ್ಕೆ



ದಾವಣಗೆರೆ, ಜೂ. 6- ಬಸಾಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಮಸ್ಥರು ಹಾಗೂ ಪೋಷಕರ ಸಮ್ಮುಖದಲ್ಲಿ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ರಮೇಶ್ ಅವರನ್ನು ಆಯ್ಕೆ ಮಾಡಲಾಯಿತು. ಪಾಲಿಕೆ ನಾಮನಿರ್ದೇಶಿತ ಸದಸ್ಯ ಬಿ.ಎಸ್. ಮರುಳಪ್ಪ, ಗ್ರಾಮದ ಮುಖಂಡರಾದ ಎಸ್. ಸುರೇಂದ್ರಪ್ಪ, ಸಿ.ಮಹೇಶ್ವರಪ್ಪ, ಎಂ.ಎಸ್ ಕೊಟ್ರಯ್ಯ, ಕೆ.ಎಲ್. ಹರೀಶ್, ಕೆ.ಬಿ. ಪ್ರಕಾಶ್, ಎಚ್. ಮಹೇಂದ್ರ, ಬಿ.ಟಿ ಮರಳಸಿದ್ದಪ್ಪ, ಎನ್.ಎಂ ಕೊಟ್ರಯ್ಯ, ತಿಪ್ಪೇಸ್ವಾಮಿ, ವೀರೇಶ್, ಲೋಕೇಶ್, ಮುಖ್ಯೋಪಾಧ್ಯಾಯ ಸೋಮಶೇಖರ್, ಎಸ್ ಡಿ ಎಂ ಸಿ ಉಪಾಧ್ಯಕ್ಷೆ ಶ್ರೀಮತಿ ನಾಗವೇಣಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಬಿಜೆಪಿಗೆ ಎಂತಹ ದಲಿತರು ಇಷ್ಟ ?



ಬೆಂಗಳೂರು, ಜೂ.6 - ಬಿಜೆಪಿಯವರಿಗೆ ಕಾನ್ವೆಂಟ್ ನಲ್ಲಿ ಓದುವ ದಲಿತರು ಇಷ್ಟ ಇಲ್ವಾ? ಬಿಜೆಪಿಯವರಿಗೆ ಎಂಥ ದಲಿತರು ಇಷ್ಟ? ಚರಂಡಿ ಎತ್ತುವ ದಲಿತರು ಇಷ್ಟವಾ? ದಲಿತರು ಎಲ್ಲಿ ಇರಬೇಕು ಅಂತ ಬಯಸುತ್ತೀರಿ ಎಂದು ಶಾಸಕ ಪ್ರಿಯಾಂಕ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಸುನಿಲ್ ಕುಮಾರ್ ಅವರು, ಕಾನ್ವೆಂಟ್ ದಲಿತ ಅಂತ ನನ್ನ ಬಗ್ಗೆ ಹೇಳಿದ್ದಾರೆ. ಇಂಥ ಹೇಳಿಕೆಗಳನ್ನು ಮಂತ್ರಿಗಳಿಗೆ ಬಿಜೆಪಿ ಐಟಿ ಸೆಲ್ ಹೇಳಿಕೊಡುತ್ತಾ ಎಂದರು.

ದಲಿತರು ಬೆಂಗಳೂರಲ್ಲಿ ಹುಟ್ಟಬಾರದಾ? ಮೈಸೂರು ದಲಿತರು ಬೇರೆ, ಬೆಂಗಳೂರು ದಲಿತರು ಬೇರೆಯಾ? ನಾನು ಓದಿದ್ದು ಕಾನ್ವೆಂಟ್ ನಲ್ಲಿ ಅಲ್ಲ, ಉಡುಪಿಯ ಅದಮಾರು ಮಠದ ಶಾಲೆ ಬೆಂಗಳೂರಲ್ಲಿದೆ. ಆ ಅದಮಾರು ಮಠದ ಶಾಲೆಯಲ್ಲಿ ಓದಿದ್ದೇನೆ ಎಂದು ಹೇಳಿದರು.

ನಾನು ಪ್ರಜ್ಞಾವಂತ ದಲಿತ, ನಾನು ಕಾಸ್ಮೋಪಾಲಿಟನ್ ದಲಿತ. ಚಿಕಾಗೋದಿಂದ ಹಿಡಿದು ಚಿತ್ತಾಪುರದವರೆಗೆ ಯಾವುದೇ ವಿಷಯ ನಿರ್ಧಾರ ಮಾಡಿ ನಾನು ಚರ್ಚೆಗೆ ಸಿದ್ದ ಇದ್ದೇನೆ. ನಾನು ವಿರೋಧ ಪಕ್ಷದ ವಕ್ತಾರ, ನಿಮ್ಮನ್ನು ಹೇಳಿಕೊಂಡು ಕೇಳಿಕೊಂಡು ಕೂರುವುದಕ್ಕೆ ನಾನು ಇದ್ದೀನಾ? ವೈಯಕ್ತಿಕ ಟೀಕೆ ಮಾಡುವುದು ನಿಮ್ಮ ಸ್ಟ್ರಾಟಜಿ. ನೀವು ಎಷ್ಟೇ ವೈಯಕ್ತಿಕ ಟೀಕೆ ಮಾಡಿದರೂ ನಾನು ಪ್ರಶ್ನೆ ಮಾಡುವುದನ್ನು ನಿಲ್ಲಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ರೋಹಿತ್ ಚಕ್ರತೀರ್ಥ ಅವರ ಸಮಿತಿಯ ಪ್ರಜ್ಞಾವಂತಿಕೆಯ ಬಗ್ಗೆ ನಮಗೆ ಅನುಮಾನ ಇದೆ. ಪ್ರತಿಯೊಂದು ಸಮಾಜಕ್ಕೂ ಪಠ್ಯಪುಸ್ತಕದಲ್ಲಿ ಅವಮಾನ ಮಾಡಿದ್ದಾರೆ. ಹಿರಿಯ ಬಿಜೆಪಿ ನಾಯಕರ ಮೌನ ಯಾಕೆ? ಎಂದವರು ಪ್ರಶ್ನಿಸಿದ್ದಾರೆ.

## ಕ್ರೀಡಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ ಜೂ.6- ರಾಜ್ಯ ಸರ್ಕಾರದ ಕ್ರೀಡಾ ವಿದ್ಯಾರ್ಥಿ ವೇತನ ಯೋಜನೆಯಡಿ ಪ್ರತಿಭಾವಂತ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಾಧ್ಯಮಿಕ/ಪ್ರೌಢ ಶಾಲಾ ವಿದ್ಯಾರ್ಥಿ ಕ್ರೀಡಾಪಟು (6ನೇ ತರಗತಿಯಿಂದ 10ನೇ ತರಗತಿ) ಗಳಿಗೆ ವಾರ್ಷಿಕ ರೂ.10,000 ದಂತೆ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡುವ ಯೋಜನೆ ಇಲಾಖೆಯಲ್ಲಿ ಜಾರಿಯಲ್ಲಿದ್ದು, ಈ ಯೋಜನೆಯನ್ವಯ ಪ್ರಸ್ತುತ ಮಾಧ್ಯಮಿಕ ಅಥವಾ ಪ್ರೌಢಶಾಲೆ ಯಲ್ಲಿ ಓದುತ್ತಿರುವ ಕ್ರೀಡಾಪಟು ಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು.

ವಿದ್ಯಾರ್ಥಿ ವೇತನಕ್ಕಾಗಿ ಅರ್ಹ ಕ್ರೀಡಾಪಟುಗಳು ಅಧಿಕೃತ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಇದೇ ದಿನಾಂಕ 30ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-237480.

## ಅನ್‌ಮೋಲ್ ಶಾಲೆಯಲ್ಲಿ 'ವಿಶ್ವ ಜೀವ ವೈವಿಧ್ಯ ದಿನ' ಪ್ರತಿಜ್ಞಾ ವಿಧಿ



ದಾವಣಗೆರೆ, ಜೂ.6- ಸಮೀಪದ ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ 'ವಿಶ್ವಜೀವ ವೈವಿಧ್ಯ ದಿನ' ಹಾಗೂ 'ವಿಶ್ವ ಪರಿಸರ ದಿನ' ಆಚರಣೆಯ ಪ್ರಯುಕ್ತ ಇಂದು ವಿದ್ಯಾರ್ಥಿಗಳಿಗೆ 'ಪ್ರತಿಜ್ಞಾ ವಿಧಿ' ಕಾರ್ಯಕ್ರಮವನ್ನು ನಡೆಸಲಾಯಿತು.

ಮಹಾನಗರ ಪಾಲಿಕೆ ಹಾಗೂ ಅನ್‌ಮೋಲ್ ಪಬ್ಲಿಕ್ ಸ್ಕೂಲ್‌ನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದು, ಮಹಾಪೌರರಾದ ಶ್ರೀಮತಿ ಜಯಮ್ಮ ಆರ್. ಗೋಪಿನಾಯ್ಕ್, ಜೀವ ವೈವಿಧ್ಯ ನಿರ್ವಹಣಾ ಸಂಸ್ಥೆಯ ಗಿರೀಶ್ ದೇವರಮನಿ, ಶ್ರೀಮತಿ ರೋಹಿಣಿ, ಸಹಾಯಕ ಮುಖ್ಯ ಅಭಿಯಂತರ ಜಗದೀಶ್ ಎಸ್.ಆರ್ ಮತ್ತು ಶಾಲೆಯ ಪ್ರಾಂಶುಪಾಲ ಕೊಟ್ರೇಶ್.ಯು, ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪರಿಸರ ಜಾಗೃತಿಯ ಕುರಿತು 'ಪರಿಸರ ಪರಿಷತ್ ಸಮಿತಿ'ಯ ಸದಸ್ಯರಾದ ಗುರುಸಿದ್ಧಸ್ವಾಮಿ, ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ.6-ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್, ಸ್ವಾಪ್ ಸಹಯೋಗದೊಂದಿಗೆ ಕಾಲೇಜಿನ ಆವರಣದಲ್ಲಿ ಪ್ರಾಂಶುಪಾಲ ಡಾ.ಆರ್. ಅಂಜಿನಪ್ಪ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರು ಒಂದೊಂದು ಸಸಿ ನೆಟ್ಟು ಅದರ ಲಾಲನೆ ಪೋಷಣೆ ಮಾಡಿದರೆ ನಿಸರ್ಗದಲ್ಲಿ ಆಗುವ ಏರುಪೇರುಗಳನ್ನು ಹಾಗೂ ಅನಾಹುತವನ್ನು ತಡೆಗಟ್ಟಬಹುದು ಎಂದರು.

ಇದೇ ವೇಳೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕರುಗಳಾದ ಅದಿತಿ ಯು, ರಂಜಿತಾ ಎಲ್, ಅಕ್ಷಯ್ ಎಂ ,ಅಮೃತ ಟಿ, ರಮ್ಯ ಜಿ.ಎಂ, ಮೈನಾ ಹೆಚ್. ಎಸ್, ಸುದೀಪ್ ಎಸ್, ಭೀಮ ನಾಯ್ಕ್, ಅವರು ಸಸಿಗಳನ್ನು ದತ್ತು ತೆಗೆದುಕೊಳ್ಳುವ ಮೂಲಕ ಅವುಗಳನ್ನು ಬೆಳೆಸಿ, ಉಳಿಸಿ, ಪೋಷಣೆ ಮಾಡಿ ಸಂರಕ್ಷಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಪ್ರತಿಜ್ಞೆ ಮಾಡಿದರು.

ಕಾಲೇಜಿನ ಸಿಬ್ಬಂದಿಗಳಾದ ಪ್ರೊ. ಭೀಮಣ್ಣ. ಸುಣಗಾರ, ಪ್ರೊ.ಗಿರಿಸ್ವಾಮಿ, ಪ್ರೊ. ಗುರುದೇವ, ಪ್ರೊ. ನಟರಾಜ್, ಡಾ. ಶಿವಕುಮಾರ್, ಡಾ. ದಿನೇಶ್, ಡಾ ತಿರುಮಲ, ಡಾ. ಯೋಗೀಶ್, ಡಾ. ಸೋಮಶೇಖರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾರ್ಯಕಾರಿಣಿ ಸಭೆ



ದಾವಣಗೆರೆ, ಜೂ. 6- ಭಾರತೀಯ ಜನತಾ ಪಾರ್ಟಿಯ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾರ್ಯಕಾರಿಣಿ ಸಭೆ ಬಿಜೆಪಿ ಕಛೇರಿಯಲ್ಲಿ ನಡೆಯಿತು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಮಾಯಕೊಂಡ ಕ್ಷೇತ್ರದ ಶಾಸಕ ಪ್ರೊ.ಲಿಂಗಣ್ಣ, ಜಿಲ್ಲಾ ಅಧ್ಯಕ್ಷ ವೀರೇಶ್ ಹನಗವಾಡಿ, ದಾವಣಗೆರೆ ಜಿಲ್ಲಾ ಪ್ರಭಾರಿ ಶಿವಲಿಂಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಬಯಲು ಸೀಮೆ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಜಿಲ್ಲಾ ಉಪಾಧ್ಯಕ್ಷ ಮಂಜಾನಾಯ್ಕ್, ಮಾಜಿ ಶಾಸಕ ಎಂ. ಬಸವರಾಜ್‌ನಾಯ್ಕ್, ಎಸ್.ಟಿ. ಮೋರ್ಚಾ ಅಧ್ಯಕ್ಷ ಕೃಷ್ಣಕುಮಾರ್, ಮಾಯಕೊಂಡ ಪ್ರಧಾನ ಕಾರ್ಯದರ್ಶಿ ಮಹಾಬಲೇಶ್, ಓಂಕಾರಪ್ಪ, ಮಾಧ್ಯಮ ಪ್ರಮುಖ ಎಂ.ಎನ್ ಸಂತೋಷ್ ಹಾಗೂ ಎಲ್ಲಾ ಮಂಡಲಗಳ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸಮಿತಿ ಸದಸ್ಯರುಗಳು, ಮೋರ್ಚಾಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

## ಕುಂದುವಾಡ ಕೆರೆಯ ಬಫರ್ ಜೋನ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ.6- ಪರಿಸರ ದಿನಾಚರಣೆ ಅಂಗವಾಗಿ ಕುಂದುವಾಡ ಕೆರೆ ಪಕ್ಕದ ಬಫರ್ ಜೋನ್ ನಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಮಹಾನಗರ ಪಾಲಿಕೆಯಿಂದ ಆಯೋಜಿಸಲಾಗಿತ್ತು. ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿ ನಾಯ್ಕ ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿದರು.

ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಮಾಜಿ ಮೇಯರ್ ಎಸ್.ಟಿ.ವೀರೇಶ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಉದಯಕುಮಾರ್, ಮಂಜಾನಾಯ್ಕ್, ಸೋಗಿ ಶಾಂತಕುಮಾರ್, ಬಿಜೆಪಿ ಮುಖಂಡ ಗೋಪಿನಾಯ್ಕ್, ಪಾಲಿಕೆಯ ಸದಸ್ಯರು, ಅಧಿಕಾರಿ ವರ್ಗದವರು, ನಗರದ ಪರಿಸರ ವೇದಿಕೆ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

## ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ. 6- ನಗರದ ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸದಸ್ಯರ ಮಕ್ಕಳಿಗೆ ಹಾಗೂ ದಾವಣಗೆರೆ ತಾಲ್ಲೂಕು ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ. 70 ಮತ್ತು ಅದಕ್ಕೂ ಮೇಲ್ಪಟ್ಟು ಅಂಕ ಗಳಿಸಿ ಉತ್ತೀರ್ಣರಾದವರು ಇದೇ 30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಂಘದ ಅಧ್ಯಕ್ಷ ಎನ್. ರಂಗಸ್ವಾಮಿ ಕೋರಿದ್ದಾರೆ.

ವಿವರಗಳಿಗೆ 08192 271329ಗೆ ಸಂಪರ್ಕಿಸಬಹುದು.

# ಪರಿಸರ ದಿನಾಚರಣೆಯೊಂದಿಗೆ ಜವಾಬ್ದಾರಿ ಅಳವಡಿಸಿಕೊಳ್ಳಬೇಕು

## ಎಸ್.ಎಸ್. ಬಡಾವಣೆಯ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿ ಡಾ. ಟಿ.ಎನ್. ದೇವರಾಜ್



ದಾವಣಗೆರೆ, ಜೂ.6- ಪರಿಸರ ದಿನಾಚರಣೆಯ ಜೊತೆಗೆ ಬದುಕಿನಲ್ಲಿ ಪರಿಸರ ಸಂರಕ್ಷಿಸುವ ಜವಾಬ್ದಾರಿ ಅಳವಡಿಸಿಕೊಳ್ಳಬೇಕು. ಆಗ ನೆಮ್ಮದಿ ಹಂಚುವ ಸಮಾಜದ ನಾಗರಿಕರಾಗುತ್ತೇವೆ ಎಂದು ನಗರದ ತರಳಬಾಳು ಕೃಷಿ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ಅಭಿಪ್ರಾಯಪಟ್ಟರು.

ನಗರದ ಎಸ್.ಎಸ್. ಬಡಾವಣೆ 'ಎ' ಮತ್ತು 'ಬಿ' ಬ್ಲಾಕ್‌ನಲ್ಲಿರುವ ಮುದ್ನಾಳ್ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಕಸ ರಸ ಅಭಿಯಾನ, ಎಸ್.ಎಸ್. ಬಡಾವಣೆ ನಾಗರಿಕರ ಸಮಿತಿ ಮತ್ತು ಪರಿಸರ ವೇದಿಕೆ ಹಾಗೂ ವಿಹ ವನಿತಾ ಪರಿಸರ ವೇದಿಕೆ ಸಂಯುಕ್ತಾಶ್ರಯದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆ ಕುರಿತು ಅವರು ಉಪನ್ಯಾಸ ನೀಡಿದರು.

ನಾಗರಿಕರು ಹೆಚ್ಚಾಗಿ ಗಿಡ, ಮರಗಳನ್ನು ಬೆಳೆಸಬೇಕಿದೆ. ಹಿರಿಯರ ನಡೆಯನ್ನು ಪರಿ ಪಾಲಿಸುವ ಮಕ್ಕಳು ಅಂತೆಯೇ ನಡೆಯುತ್ತಾರೆ. ಹಾಗಾಗಿ ಸೂಕ್ಷ್ಮವಾಗಿ ಗಮನಿಸಿ ನಾವು ಪರಿಸರ ಸಂರಕ್ಷಿಸಿದರೆ ಮುಂದೆಯೂ ಅದರ ಉಳಿವು ಕಾಣಬಹುದಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಸರ್ಕಾರಗಳು ಪ್ಲಾಸ್ಟಿಕ್ ನಿಯಂತ್ರಿಸುವ ಬಗ್ಗೆ ಅನೇಕ ಕ್ರಮಗಳನ್ನು ಕೈಗೊಂಡರೂ ಇದರ ಬಳಕೆ ಹೆಚ್ಚಾಗುತ್ತಿದೆ. ಇದು ಹೀಗೆ ಮುಂದುವರೆದರೆ ಮಾನವನ ಕುಲ ನಶಿಸುತ್ತದೆ. ಪ್ಲಾಸ್ಟಿಕ್‌ಗೆ ಪೂರಕವಾಗಿ ಬಯೋ ಪ್ಲಾಸ್ಟಿಕ್ ಬಗ್ಗೆ ಸಂಶೋಧನೆ ಹಂತದಲ್ಲಿದೆ. ಅಲ್ಲಿಯವರೆಗೂ ಪ್ರತಿಯೊಬ್ಬರೂ ಇದನ್ನು ಮಿತವಾಗಿ ಉಪಯೋಗಿಸಬೇಕಿದೆ ಎಂದು ಹೇಳಿದರು.

ಇಂದು ಮಾನವ ತನ್ನ ಸ್ವಾರ್ಥಕ್ಕಾಗಿ ಕಾಡುಗಳ ನಾಶ, ಗಿಡ-ಮರಗಳನ್ನು ಬೆಳೆಸದಿರುವುದು ಹೀಗೆ ಹಲವಾರು ರೀತಿಯಿಂದ ಮಳೆ ಕಡಿಮೆಯಾಗುತ್ತಿದ್ದು, ಭೂಮಿ ಮೇಲೆ ನೀರಿನ ಕೊರತೆ ಉಂಟಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕರು ಮಳೆ ನೀರು ಕೊಯ್ಲು ಪದ್ಧತಿ ಅನುಸರಿಸಿದರೆ ನೀರಿನ ಸಮಸ್ಯೆ ನೀಗಿಸಬಹುದಾಗಿದೆ ಎಂದರು.

ಪರಿಸರದಲ್ಲಿರುವ ಇತರೆ ಜೀವಿಗಳಿಗೆ ನಾವು ತೊಂದರೆ ಕೊಡದೆ ಬದುಕುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಸ್ತೆಗಳನ್ನು ನಾವು ದೇವಸ್ಥಾನದ ರೀತಿಯಲ್ಲಿ ಕಾಣಬೇಕಿದೆ. ಇದರಿಂದ ರಸ್ತೆಯಲ್ಲಿ ಉಗುಳುವುದು, ಕಸ ಹಾಕುವುದು ತಪ್ಪುತ್ತದೆ ಎಂದರು.

ತರಳಬಾಳು ಕೃಷಿ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಜಯದೇವಪ್ಪ ಅವರು ಹಸಿ ಕಸದ ನಿರ್ವಹಣೆ ಕುರಿತು ಉಪನ್ಯಾಸ ನೀಡುತ್ತಾ, ಕಸದ ನಿರ್ವಹಣೆ ಬಗ್ಗೆ ನಾಗರಿಕರಿಗೆ ಎಷ್ಟೇ ಜವಾಬ್ದಾರಿ ಮೂಡಿಸಿದರೂ ಜನರು ಜಾಗೃತರಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

**ಪರಿಸರ ಸ್ನೇಹಿ ಉಪನ್ಯಾಸಗಳು :** ಈ ಇಬ್ಬರ ಉಪನ್ಯಾಸವಲ್ಲದೇ, ತರಳಬಾಳು ಕೃಷಿ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಬಸವನಗೌಡ್ರು ತಾರಸಿ ತೋಟ ಮತ್ತು ಗಿಡ ಮರಗಳ ನಿರ್ವಹಣೆ ಕುರಿತು ಹಾಗೂ ಡಾ. ಸುರೇಂದ್ರ ವಾಯು ಮಾಲಿನ್ಯ, ಶಬ್ದ ಮಾಲಿನ್ಯ ತಡೆಗಟ್ಟುವಿಕೆ ಕುರಿತು ಉಪನ್ಯಾಸ ನೀಡಿದರು.

ಪರಿಸರ ಪ್ರೇಮಿ ಡಾ. ಶಾಂತಾ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುದ್ನಾಳ್ ಬಸವಣ್ಣ ದೇವಸ್ಥಾನ ಟ್ರಸ್ಟಿನ ಅಧ್ಯಕ್ಷ ಶಿವನಹಳ್ಳಿ ರಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಸ ರಸ ಅಭಿಯಾನದ ಪ್ರಮುಖರಾದ ಸರೋಜಮ್ಮ ಮುಂಡಾಸದ, ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯೆ ರೇಖಾ ಸುರೇಶ್, ಶಾರದಾಂಬ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಬಿ.ಟಿ. ಅಚ್ಯುತ್, ಕಂಚಿಕೆರೆ ಸುಶೀಲಮ್ಮ ಸೇರಿದಂತೆ ಇತರರು ಇದ್ದರು.

# ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ದಾವಣಗೆರೆ, ಜೂ. 6- ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಯಲ್ಲಮ್ಮನಗರದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಮಕ್ಕಳಿಂದ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಮಕ್ಕಳಿಂದ ಗಿಡ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯ ಮಹತ್ವವನ್ನು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಬಡ್ತಿ ಮುಖ್ಯ ಶಿಕ್ಷಕರಾದ ಶ್ರೀಮತಿ ಇಶ್ರತ್ ಸುಲ್ತಾನ, ಸಹ ಶಿಕ್ಷಕರುಗಳಾದ ಶ್ರೀಮತಿ ಎಸ್. ಮಂಜುಳಾ, ಶಾತಾಜ್ ಬಾನು, ನಾಜಿಮಾ ಖಾನಮ್, ಸೈರಾ ಬಾನು, ಶಾಹಿನ್ ಪರ್ವೀನ್ ಮತ್ತು ಇತರರು ಉಪಸ್ಥಿತರಿದ್ದರು.

# 33ನೇ ವಾರ್ಡ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 6- ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, 33 ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಅವರು 33ನೇ ವಾರ್ಡಿನಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ರೇಣುಕಾ ಶ್ರೀನಿವಾಸ್, ಮಂಜುನಾಥ್ ನಾಯಕ್, ದೂಡಾ ಸದಸ್ಯರಾದ ಲಕ್ಷ್ಮಣ್, ವಾರ್ಡಿನ ಬೂತ್ ಅಧ್ಯಕ್ಷ ಸಿದ್ದೇಶ್, ಕೊಟ್ರೇಶ್, ತಿಪ್ಪೇಶ್, ಭೀಮರಾಜ್, ಸ್ವಾಮಿ, ಬಿಜೆಪಿಯ ಯುವ ಮೋರ್ಚಾ ಅಧ್ಯಕ್ಷ ಸಚಿನ್, ರಾಜು , ಪವನ್ ಗೌಡ, ಕಿರಣ್, ಸ್ಥಳೀಯರಾದ ಮಾಯಕೊಂಡದ ಜೈಕುಮಾರ್, ಅಶ್ವತ್ಥ್ ನಾರಾಯಣ್, ಬಸವರಾಜಪ್ಪ ಉಪಸ್ಥಿತರಿದ್ದರು.

# ರಾಣೇಬೆನ್ನೂರು : ಎಸ್ಸೆಸ್ಸೆಲ್ಸಿ ಹೆಚ್ಚು ಅಂಕ ಪಡೆದ ರೋಟರಿ ಶಾಲಾ ವಿದ್ಯಾರ್ಥಿಗಳಿಗೆ ಸನ್ಮಾನ



ರಾಣೇಬೆನ್ನೂರು, ಜೂ.6- ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ಟ್ಯಾಗೋರ್ ಶಿಕ್ಷಣ ಸಂಸ್ಥೆಯ ರೋಟರಿ ಶಾಲೆಯ ವಿದ್ಯಾರ್ಥಿ ಗಳನ್ನು ಹಾಗೂ ನಿವೃತ್ತಿ ಹೊಂದಿದ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಕೇಲಗಾರ, ಕಾರ್ಯದರ್ಶಿ ಕೆ.ವಿ. ಶ್ರೀ ನಿವಾಸ, ಪದಾಧಿಕಾರಿಗಳಾದ ವೀರೇಶ್ ಹನಗೋಡಿಮಠ, ರಾಜಣ್ಣ ಮೋಟಗಿ, ಜಿ.ಜಿ.ಹೊಟ್ಟಿಗೌಡ್ರ, ಶಂಕರಗೌಡ ಮಾಳಗಿ, ಉಮೇಶ ಹೊನ್ನಾಳಿ, ವೀರನಗೌಡ ಪೊಲೀಸ್‌ಗೌಡ್ರ ಮತ್ತಿತರರಿದ್ದರು.

# ಮಂಜುನಾಥ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ



ದಾವಣಗೆರೆ, ಜೂ.6- ನಗರದ ಶ್ರೀ ಮಂಜುನಾಥ ಸ್ವಾಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಕಾಲೇಜು ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಾರ್ಮಿಕರು ರಾಜಕೀಯಕ್ಕೆ ಬಂದರೆ ಮಾತ್ರ ಸಮಬಾಳು, ಸಮಪಾಲು




ದಾವಣಗೆರೆ, ಜೂ.6- ಸಾರ್ವಜನಿಕ ಸೇವಾ ವಲಯದಲ್ಲಿ ಕೆಲಸ ಮಾಡುವ ಶೇ. 99 ರಷ್ಟು ಮಂದಿ ಕಾರ್ಮಿಕರಿದ್ದು, ರಾಜಕೀಯ ಪ್ರಾತಿನಿಧ್ಯಕ್ಕೆ ಮುಂದಾಗಬೇಕು. ರಾಜ್ಯದ ಜನತೆಗೆ ಸಮಬಾಳು ಸಮಪಾಲು ಸಿಗಬೇಕಾದರೆ ಕಾರ್ಮಿಕರು ಮುಂಬರುವ ದಿನಗಳಲ್ಲಿ ರಾಜಕೀಯ ಅಧಿಕಾರಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಕಟ್ಟಡ ಕಾರ್ಮಿ ಕರ ಸಂಘದ ರಾಜ್ಯ ಉಪಾಧ್ಯಕ್ಷ ಆವರಗೆರೆ ಎಚ್. ಜಿ.ಉಮೇಶ್ ಕರೆ ನೀಡಿದರು.

ನಗರದ ರೋಟರಿ ಬಾಲಭವನದಲ್ಲಿ ಕರ್ನಾಟಕ ಶ್ರಮಿಕ ಶಕ್ತಿ ಜಿಲ್ಲಾ ಘಟಕದಿಂದ ನಿನ್ನೆ ಆಯೋಜಿಸಲಾಗಿದ್ದ 'ಮೇ' ದಿನ ಕಾರ್ಮಿಕರ ಸಂಘರ್ಷದ ಐತಿಹಾಸಿಕ ಎನ್ನುವ ಕಾರ್ಮಿಕರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಎಲ್ಲಾ ಹಂತದ ಸಮಾನತೆಗಾಗಿ ಕಾರ್ಮಿಕರು ರಾಜಕೀಯ ಪ್ರವೇಶ ಮಾಡಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೇವಲ ಕಾರ್ಮಿಕರಾಗಿ ಉಳಿಯದೇ ಉನ್ನತ ಶಿಕ್ಷಣ ಪಡೆದು ರಾಜಕೀಯ ಕ್ಷೇತ್ರದತ್ತ ಮುನ್ನುಗ್ಗಬೇಕು ಎಂದು ಉಮೇಶ್ ಕರೆ ನೀಡಿದರು.

ಕಾರ್ಮಿಕರ ಸಂಘಟನೆಯ ಹೋರಾಟದ ಫಲವಾಗಿ ಇಂದು ಕೋಟ್ಯಂತರ ಜನಗಳು ಸರ್ಕಾರದ ಹಲವು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. 6 ತಿಂಗಳು ಹೆರಿಗೆ ಭತ್ಯೆ, ಸಂಬಳ ಸಹಿತ ರಜೆ ಸೇರಿದಂತೆ ಮಹಿಳೆಯರಿಗೆ ವಿವಿಧ ಸವಲತ್ತುಗಳು ಇವೆ. ಇದಲ್ಲದೆ 76 ವಿಧವಾದ ವಿವಿಧ ಸವಲತ್ತುಗಳು ಕಾರ್ಮಿಕ ಇಲಾಖೆಯಲ್ಲಿ ಸಿಗಲಿವೆ. ಇವುಗಳ ಸೌಲಭ್ಯವನ್ನು ಕಾರ್ಮಿಕರು ಪಡೆಯಬೇಕೆಂದು ಕರೆ ನೀಡಿದರು.

ಕಾರ್ಮಿಕ ಇಲಾಖೆಯ ಗುರ್ತಿನ ಚೀಟಿ ಹೊಂದುವ ಮೂಲಕ ಗುರುತಿನ ಚೀಟಿದಾರರ ಇಬ್ಬರು ಮಕ್ಕಳಿಗೆ ಎಲ್‌ಕೆಜಿಯಿಂದ ಉನ್ನತ ಶಿಕ್ಷಣದವರೆಗೂ ಸಹಾಯಧನ ನೀಡಲಾಗುತ್ತದೆ. ಅಲ್ಲದೆ ನಿವೃತ್ತಿಯ ನಂತರ ನಿವೃತ್ತಿ ವೇತನವು ಸಿಗಲಿದೆ. ಮಾತ್ರವಲ್ಲ ಆಕಸ್ಮಿಕ ಮರಣ ಹೊಂದಿದರೂ ಸಹ ಪರಿಹಾರ ದೊರಕಲಿದೆ. ಅಲ್ಲದೆ ಇಎಸ್‌ಐ ಸೌಲಭ್ಯವು ಮುಂಬರುವ ದಿನಗಳಲ್ಲಿ ಸಿಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸತೀಶ್ ಅರವಿಂದ್, ಹೊನ್ನಾಳಿಯ ಹಳದಪ್ಪ, ಗಿರಿಯಮ್ಮ, ಏಜಾಜ್, ಶೈಲಮ್ಮ, ಆಯುಷ್ಯ ಎಸ್.ಕೆ., ಆದಿಲ್ ಖಾನ್, ಸೈಯದ್ ಗೌಸ್ ಹಾಗು ಇತರರು ಇದ್ದರು.

# ಆಕ್ಮೆ ಕ್ಲೀನ್ ಟೆಕ್ : 52 ಸಾವಿರ ಕೋ.ರೂ. ಹೂಡಿಕೆ

(1ನೇ ಪುಟದಿಂದ) ಅಗತ್ಯ ಬೆಂಬಲ ನೀಡಲಿದೆ. ನೀವು ಸಹ ಸಕಾಲದಲ್ಲಿ ಯೋಜನೆ ಜಾರಿಗೊಳಿಸಿ ಎಂದು ಮುಖ್ಯಮಂತ್ರಿಗಳು ಸಲಹೆ ನೀಡಿದರು. ಆಕ್ಮೆ ಗ್ರೂಪ್ ಜಾಗತಿಕ ಮಟ್ಟದಲ್ಲಿ ಹೈಡ್ರೋಜನ್ –ಅಮೋನಿಯ ಘಟಕಗಳ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದೆ. ರಾಜಸ್ಥಾನದ ಬಿಕನೇರ್ ನಲ್ಲಿ ವಿಶ್ವದ ಮೊದಲ ಹೈಡ್ರೋಜನ್ ಅಮೋನಿಯ, ಸೋಲಾರ್ ಘಟಕವನ್ನು ಸ್ಥಾಪಿಸಿದ್ದು, ಕಾರ್ಯಾರಂಭ ಮಾಡಿದೆ ಎಂದು ಆಕ್ಮೆ ಗ್ರೂಪ್ ನ ಉಪಾಧ್ಯಕ್ಷ ಶಶಿ ಶೇಖರ್ ಅವರು ತಿಳಿಸಿದರು.

ಇತ್ತೀಚೆಗೆ ಸ್ವಿಟ್ಜರ್ಲೆಂಡ್‌ನ ದಾವೋಸ್‌ನ ರೆನ್ಯೂ ಪವರ್ ಕಂಪೆನಿಯವರು ನವೀಕರಿಸಬಹುದಾದ ಇಂಧನ ವಲಯದಲ್ಲಿ 50,000 ಕೋಟಿ ರೂ. ಹೂಡಿಕೆ ಒಪ್ಪಂದ ಮಾಡಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

# ಮುನ್ನೆಚ್ಚರಿಕೆಯಾಗಿ ಲಾರ್ವ ಪರಿಶೀಲನೆ



ಮಲೇಬೆನ್ನೂರು

ಮಲೇಬೆನ್ನೂರು, ಜೂ. 6- ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಬಹುದಾದ ವಿಚಾರಗಳನ್ನು ಜನರಿಗೆ ತಿಳಿಸಿ, ಡೆಂಗ್ಯೂ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಶನಿವಾರ ಟಿಹೆಚ್‌ಓ ಡಾ. ಚಂದ್ರಮೋಹನ್, ತಾ. ಹಿರಿಯ ಆರೋಗ್ಯ ಅಧಿಕಾರಿ ಎಂ. ಉಮ್ಮಣ್ಣ ಅವರ ನೇತೃತ್ವದ ತಂಡ ರಾಜನಹಳ್ಳಿ, ತಿಮ್ಲಾಪುರ, ಹೊಸಳ್ಳಿ ಗ್ರಾಮಗಳಿಗೆ ತೆರಳಿ ಪರಿಶೀಲನೆ ನಡೆಸಿತು.

# 13 ರಂದು ರಾಜ್ಯಕ್ಕೆ ರಾಷ್ಟ್ರಪತಿ

(1ನೇ ಪುಟದಿಂದ) ಸಮಾರಂಭದಲ್ಲಿ ಪಾಲ್ಗೊಂಡು ಅಂದು ರಾತ್ರಿ ರಾಜಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಜೂನ್ 14 ರಂದು, ಮಂಗಳವಾರ ಬೆಳಿಗ್ಗೆ ಬೆಂಗಳೂರಿನ ಕನಕಪುರ ರಸ್ತೆ ಸಮೀಪದ ದೊಡ್ಡಕಲ್ಲಸಂದ್ರದ ವೈಕುಂಠ ಬೆಟ್ಟದಲ್ಲಿ ತಿರುಪತಿ ತಿರುಮಲ ದೇವಾಲಯವನ್ನು ಹೋಲುವ ಇಸ್ಕಾನ್ ದೇಗುಲದ ಲೋಕಾರ್ಪಣೆ ಸಮಾರಂಭದಲ್ಲಿ ರಾಷ್ಟ್ರಪತಿಯವರು ಭಾಗವಹಿಸಲಿದ್ದಾರೆ. ಅಲ್ಲದೆ, ಅದೇ ದಿನ ಅಪರಾಹ್ನ ಅವರು ದೆಹಲಿಗೆ ತೆರಳಲಿದ್ದಾರೆ.

# ನಿರಾಶ್ರಿತರಿಗೆ ವನಿತಾದಿಂದ ಅರ್ಜಿ

ದಾವಣಗೆರೆ, ಜೂ.6- 'ಆಶ್ರಯ' ಹಿರಿಯ ವನಿತೆಯರ ಆನಂದಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳಿಲ್ಲದವರು, ಮಕ್ಕಳು ಇದ್ದು ಅವರನ್ನು ನೋಡಿಕೊಳ್ಳದವರು, ಅನಾಥರು, ಅಬಲೆಯರಿಗೆ ಆಸರೆ ನೀಡುತ್ತಿದೆ. ಆಸಕ್ತ 60ವರ್ಷಕ್ಕೆ ಮೇಲ್ಪಟ್ಟ ಮಹಿಳೆಯರು 94806 87273, 98448 50414, 98451 66724ನ್ನು ಸಂಪರ್ಕಿಸಬಹುದು.


**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್ ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ಸೈಟುಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 40x60 ದಕ್ಷಿಣ ಹೈಟೆಕ್ ಹಾಸ್ಪಿಟಲ್ ರಸ್ತೆ, ಸಾಯಿಬಾಬಾ ದೇವಸ್ಥಾನ ಹಿಂಭಾಗ 30x50 ಪೂರ್ವ. ಶಿವ-ಪಾರ್ವತಿ ಬಡಾವಣೆಯಲ್ಲಿ 40x60 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30×40 30×40 ಅಕ್ಕ ಪಕ್ಕ, ಎಸ್ ಎಸ್ ಹೈಟೆಕ್ ಬಡಾವಣೆಯಲ್ಲಿ 30×47 ಹಾಗೂ ಹೊಸ ಲೇಔಟ್ ಗಳಲ್ಲಿ 30×40, 30×50
98444 91792

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಮಾರಾಟಕ್ಕಿದೆ**
ನೂತನ ಕಾಲೇಜ್ ಹಿಂಭಾಗದಲ್ಲಿ LIC ಕಾಲೋನಿಯಲ್ಲಿ 40x30 East ಕೆಳಗಡೆ ಎರಡು ಬೆಡ್ ರೂಂ ಮನೆ. ಮೇಲೆ 4 ಬೆಡ್ ರೂಂ ಮನೆ ಹೊಸಮನೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಸಿಕ್‌ನಿಂದ ಸುಲಭವಾಗಿ ಇಂಗ್ಲಿಷ್ ಕಲಿಯಿರಿ**
100% Result Rs. 1000 Only.
ಮಿರಜ್‌ಕರ್ ಟ್ಯುಟೋರಿಯಲ್
ಎವಿಕೆ ರಸ್ತೆ, ದಾವಣಗೆರೆ.
88925 59549

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಸುಸಜ್ಜಿತವಾದ ವಾಣಿಜ್ಯ ಮಳಿಗೆ 1ನೇ ಮಹಡಿ ಬ್ಯಾಂಕ್ ಹಾಗೂ ಎಲ್ಲಾ ರೀತಿಯ ವ್ಯಾಪಾರಗಳಿಗೆ, ಶೋ ರೂಂಗೆ ಯೋಗ್ಯವಾದ 4503 ಅಡಿಗಳು ಹಾಗೂ 3250 ಅಡಿಗಳುಳ್ಳ ಸೆಲ್ಲರ್ ಬಾಡಿಗೆಗೆ ಇದೆ. ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
84959 91223, 96205 95579

**2BHK ಮನೆ ಬಾಡಿಗೆಗೆ ಇದೆ**
First Floor (Pure Veg) Vidyanagara park, 2nd Bus Stop, D.No. I/2 Davanagere-5
98450 08516

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಪಿಯುಸಿ/ಡಿಗ್ರಿ ಮತ್ತು ಬೇಸಿಕ್ ಕಂಪ್ಯೂಟರ್ ಆದ ಮಹಿಳೆ. ಸಂಪರ್ಕಿಸಿ :
ಫೋ. : 81519 78654

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, 11ನೇ ಮೇನ್ 3ನೇ ಕ್ರಾಸ್ ಬಾಪೂಜಿ ಹೈಸ್ಕೂಲ್ ಹತ್ತಿರ, ಮೊದಲನೇ ಮಹಡಿಯಲ್ಲಿ ಉತ್ತರ ದಿಕ್ಕಿಗೆ ವಾಸ್ತು ಪ್ರಕಾರ ಇರುವ ಬೋರ್‌ವೆಲ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇರುವ ಎರಡು ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ.
94480 46613

**ಕಮರ್ಷಿಯಲ್ / ರೆಂಟೆಡ್ ಮನೆ ಬಾಡಿಗೆಗಿದೆ**
ಡೋರ್ ನಂ. 308/39 ಸರ್ಕೀಟ್ ಹೌಸ್ ಹತ್ತಿರ, NH4 ರಸ್ತೆ, ಹತ್ತಿರ 7 ಚದುರ ಅಡಿ ಕಮರ್ಷಿಯಲ್ ಹಾಗೂ 2BHK ಮನೆ ಬಾಡಿಗೆಗಿದೆ. ಸಂಪರ್ಕಿಸಿ :
63628 95485, 90352 24661

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿರಿ**
40x50 ಸೈಜಿನಲ್ಲಿ ಮೂರು ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್ 30x50 ಸೈಜಿನಲ್ಲಿ 2 ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್. 2 ಬೆಡ್ ರೂಂ ಮನೆ ಗ್ರೌಂಡ್ ಫ್ಲೋರ್.
ದಕ್ಷೀತ್ ಏಜೆಂಟ್
77955 06795

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
CP.Ed/ BP Ed - 2
B.Sc, B.Ed (PM) - 2
BA/ BSc - 2
Computer Teacher - 1
ಮೌಂಟ್ ಎವರೆಸ್ಟ್ ವಿದ್ಯಾಲಯ
ಜಯನಗರ, ನಿಟುವಳ್ಳಿ, ದಾವಣಗೆರೆ.
97439 24203, 91645 05229

**HELP / ಸಹಾಯ**
EC, ಖಾತಾ ವರ್ಗಾವಣೆ, ಖಾತಾ ಎಕ್ಸ್‌ಟ್ರ್ಯಾಕ್ಟ್, ಆಸ್ತಿ ನೋಂದಣಿ ಮತ್ತು ಸಾಲಗಳನ್ನು ಪಡೆಯಲು ನಾವು ನಿಮಗೆ ಸಹಾಯ ಮಾಡುತ್ತೇವೆ
96118 66449

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಚರ್ಚ್ ರಸ್ತೆ, ದಾವಣಗೆರೆ
63621 49155

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಪಾರ್ಟ್ ಟೈಂ ಹಾಗು ಫುಲ್ ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಹಾಗೂ ದಾವಣಗೆರೆಯಲ್ಲಿ ವಾಸವಿರುವವರಿಗೆ ಆದ್ಯತೆ.
ವಿಳಾಸ: ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
2ನೇ ಮೇನ್, ಕೆ.ಟಿ.ಜೆ. ನಗರ, ದಾವಣಗೆರೆ-2.
86607 75329

**ಸೈಟುಗಳು ಮಾರಾಟಕ್ಕಿವೆ**
40x60 South, 30x48 North ನಿಜಲಿಂಗಪ್ಪ ಬಡಾವಣೆಯಲ್ಲಿ. 30x50 West ಮಹಾಲಕ್ಷ್ಮಿ ಲೇಔಟ್‌ನಲ್ಲಿ. 30x50 West M.B ಸಿಟಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಿಕ್ಷಕರು ಬೇಕಾಗಿದ್ದಾರೆ**
BSc., B.Ed.. M.Sc., B.Ed.. B.Sc., / M.Sc., B.PEd., / C.PEd.
ನಂದಗೋಕುಲ ಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಆರ್‌ಟಿಓ ಆಫೀಸ್ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
Ph. : 99640 17729
*ಪಾರ್ಟ್‌ಟೈಂ ಶಿಕ್ಷಕರು ಸಹ ಸಂಪರ್ಕಿಸಬಹುದು.

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಲಾಯರ್ ರೋಡ್‌ನಲ್ಲಿ 40x50 60 ಅಡಿಗೆ South. 19x100 South P.B ರೋಡ್‌ಗೆ 100 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ಸೈಟುಗಳು ಮಾರಾಟಕ್ಕಿವೆ**
30x40,30x50x40x60, ಬನಶಂಕರಿ ಬಡಾವಣೆ, ಶಿವಪಾರ್ವತಿ ಬಡಾವಣೆ, ಜೆ.ಹೆಚ್ ಪಟೇಲ್, ವಾಜಪೇಯಿ ಬಡಾವಣೆ, ಸಿದ್ಧವೀರಪ್ಪ, ಎಸ್.ಎಸ್ ಬಡಾವಣೆ, ಜಯನಗರ, ಹೈಟೆಕ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಉತ್ತಮ ದರದಲ್ಲಿ ಸೈಟುಗಳು ದೊರೆಯುತ್ತವೆ. ಕಮರ್ಷಿಯಲ್ ಸೈಟುಗಳಿಗಾಗಿ ವಿಚಾರಿಸಿ :
ಏಜೆಂಟ್ ಅಭಿಷೇಕ್ ಅಕ್ಕೀರ್
97315 12365

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ದಾವಣಗೆರೆ ಸುತ್ತಮುತ್ತ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8000 ರಿಂದ 9000 ಮತ್ತು ESI & PF ಸೌಲಭ್ಯವಿರುತ್ತದೆ. ಸಂಪರ್ಕಿಸಿ :
63667 28552, 86603 98210
96060 50591

**ಬೇಕಾಗಿದ್ದಾರೆ**
ಫರ್ನಿಚರ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ನ್ಯೂ ನಯನ ಫರ್ನೀಚರ್ಸ್
ಮಂಡಿಪೇಟೆ, ದಾವಣಗೆರೆ.
99017 16310

**ಪವರ್‌ಸ್ಟಾರ್ ಗೀಸರ್**
ಹಾಗೂ ಪರ್ವ ಮಿಲೆಟ್ ಆಯುರ್ವೇದಿಕ್ ಹೆಲ್ತ್ ಮಿಕ್ಸ್ ಕಂಪನಿಯಲ್ಲಿ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ.
91499 63298

**EXCHANGE OFFER**
ನಮ್ಮಲ್ಲಿ ಎಲ್ಲಾ ತರಹದ ಸೋಫೆ ಮೆಸ್ ಮತ್ತು ಕುಷನ್, ತಡಿ ಫರ್ನಿಚರ್ ಮಾಡುತ್ತೇವೆ. ಸ್ಪಾಂಜ್ ಬೆಡ್ ರಿಪೇರಿ ಸಹ ಮಾಡುತ್ತೇವೆ. (Exchange Offer ಇವೆ)
ಫೋ. : 63603 92458

**SPOKEN ENGLISH**
The Only Place to Learn Spoken English @ VETA
Experts in Spoken English
98450 40493, 99028 60360

**ಬೇಕಾಗಿದ್ದಾರೆ**
ಮನೆ ಕೆಲಸ ಹಾಗೂ ಅಡುಗೆ ಮಾಡುವವರು ಬೇಕಾಗಿದ್ದಾರೆ. ಎಸ್.ಎಸ್. ಲೇಔಟ್ 'ಎ' ಬ್ಲಾಕ್ ಗುರು ಕೊಟ್ಟೂರೇಶ್ವರ ಹೋಟೆಲ್ ಹತ್ತಿರ.
93417 77567, 99861 83859

**ಮನೆ ಬಾಡಿಗೆಗೆ ಇದೆ**
ಡೋರ್ ನಂ. 337/39 ಗಣೇಶ್ ಲೇಔಟ್ KSRTC ಬಸ್ ನಿಲ್ದಾಣದ ಪಕ್ಕ ಎರಡನೇ ಮಹಡಿ 1BHK.
ಸಂಪರ್ಕಿಸಿ :
94489 25906
ಸಸ್ಯಹಾರಿಗಳಿಗೆ ಮಾತ್ರ.

**House For Sale**
2427/A, 10th Main, 2nd Cross, MCC 'A' Block, Davanagere Residential Home. 60 x 30 Measurements Contact
98454 58294, 78921 13752

**ವಧು ಬೇಕಾಗಿದೆ**
32 ವರ್ಷದ ಬ್ರಾಹ್ಮಣ ವರನಿಗೆ 25 ವರ್ಷದೊಳಗಿನ ಯಾವುದೇ ಜಾತಿ ವಧು ಬೇಕಾಗಿದೆ. ಜಾತಿ ಅಭ್ಯಂತರವಿಲ್ಲ.
63661 25016

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಶಿಕ್ಷಕರು ಬೇಕಾಗಿದ್ದಾರೆ**
ವಿಂಪನ ಸೆಂಟ್ರಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಸಾಸ್ವೇಹಳ್ಳಿ ನಮ್ಮ ಶಾಲೆಯಲ್ಲಿ ಇಂಗ್ಲಿಷ್, ಗಣಿತ ವಿಜ್ಞಾನ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲು B.Ed ವಿದ್ಯಾರ್ಹತೆಯುಳ್ಳ ಶಿಕ್ಷಕರು ತಕ್ಷಣ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
77608 39839

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಪಾಸ್ ಅಥವಾ ಫೇಲ್, ವಯೋಮಿತಿ 15 ರಿಂದ 16, ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ ದಾವಣಗೆರೆ.
ಸಂಪರ್ಕಿಸಿ :
86609 06338, 70193 19723

**ಸೈಟ್ ಮಾರಾಟಕ್ಕಿದೆ**
ಸೈಜ್ 47x70, Bit of Land 60 ಅಡಿ Free ಸಿಗುತ್ತದೆ. Facing : North P.B Roadಗೆ ಲಗಾತ್ತಾಗಿರುತ್ತದೆ. Location : P.B Road Avaragere, Hyundai Car Showroom ಪಕ್ಕದಲ್ಲಿ ಸುತ್ತಲೂ ಕಾಂಪೌಂಡ್ ಹಾಕಿರುತ್ತದೆ.
Only Genuine buyers May Contact :
91643 82998, 90082 27199

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888

**WANTED**
In Davanagere Swiggy Delivery Boys (Part Time \ Full Time)
Weekly Salary : 5000 / 6000
95382 00008, 99866 92789

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ಬೇಕಾಗಿದ್ದಾರೆ**
ಫ್ಯಾಕ್ಟರಿ ಕೆಲಸಕ್ಕೆ ಹೆಣ್ಣು / ಗಂಡು ಮಕ್ಕಳು ಬೇಕಾಗಿದ್ದಾರೆ.ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರೋಡ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ, ಭೇಟಿಯ ಸಮಯ : ಬೆ. 9:00 ರಿಂದ ಸಂಜೆ 6:00 ರವರೆಗೆ.
97395 55551

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಮಾರಾಟಕ್ಕಿದೆ**
#628, ಆಂಜನೇಯ ಬಡಾವಣೆ, ಎಂ.ಇ.ಎಸ್. ಕಾನ್ವೆಂಟ್ ರೋಡ್, 4ನೇ ಮೇನ್, 4ನೇ ಕ್ರಾಸ್‌ನಲ್ಲಿ 40x54, ಅಳತೆಯಲ್ಲಿ ಎರಡು ಮನೆಗಳು ಮಾರಾಟಕ್ಕಿವೆ.
97402 92935, 95918 88390

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ**
ಸರ್ವೆ ನಂಬರ್ 134/3 ಒಂದು ಮೂಕ್ಕಾಲು ಎಕರೆ ಕೈಗಾರಿಕಾ ವಲಯ (N.A) ಆಗಿದೆ. ಹೊಲ ಮಾರಾಟಕ್ಕಿದೆ. ಐಗೂರು, ದಾವಣಗೆರೆ ಜಿಲ್ಲೆ.
90365 59096, 92428 37951

## ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಪರಿಸರ ದಿನಾಚರಣೆ



ದಾವಣಗೆರೆ, ಜೂ. 6- ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಐಎಟಿ ಇವರ ಸಂಯುಕ್ತಾಶ್ರಯ ದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು ಮಾತನಾಡುತ್ತಾ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ನಮಗಿರುವುದು ಒಂದೇ ಭೂಮಿ, ಅದನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ವಿಶ್ವ ಪರಿಸರ ದಿನದ ಅಂಗವಾಗಿ ಗಿಡಗಳನ್ನು ನಿವೃತ್ತ ಕೃಷಿ ಸಹಾಯಕ ಅಧಿಕಾರಿ ರುದ್ರಪ್ಪ ಅವರಿಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ಪರಿಕರ ಮಾರಾಟ ಮಾಡುವ ಡಿಪ್ಲೋಮಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಎ.ಸಿ.ಎಂ.ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 6- ನಗರದ ಎ.ಸಿ.ಎಂ. ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಎಸ್.ಎಂ. ಮಂಜುನಾಥ ಸ್ವಾಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮ್ಯಾನೇಜಿಂಗ್ ಟ್ರಸ್ಟಿ ಶ್ರುತಿ ಎಂ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಭವಾನಿ, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಅಮೃತ, ವೀರೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ : ಸನ್ಮಾನ



ಹರಪನಹಳ್ಳಿ, ಜೂ.6 ತಾಲ್ಲೂಕು ಅಳಿಗಂಚಿಕೆರೆಯಲ್ಲಿ ಕಳೆದ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಿಕ್ಕಮೇಗಳಗೆರೆಯ ಡಾ. ಜಯಣ್ಣ ಕಂಚಿಕೆರೆ ಮತ್ತು ಅವರ ಸ್ನೇಹ ಬಳಗದಿಂದ ಸನ್ಮಾನಿಸಲಾಯಿತು.

## ನಾಮದೇವ ಸಿಂಪಿ ಸಮಾಜದಿಂದ ಅವಿನಾಶ್‌ರಾವ್ ಅವರಿಗೆ ಸನ್ಮಾನ



ದಾವಣಗೆರೆ, ಜೂ.6- ಕೇಂದ್ರ ಲೋಕಸೇವಾ ಆಯೋಗದಿಂದ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 32ನೇ ರ್‍ಯಾಂಕ್ ಪಡೆದು ಕರ್ನಾಟಕಕ್ಕೆ ಕೀರ್ತಿ ತಂದಿರುವ ಅವಿನಾಶ್‌ರಾವ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಂ.ಎಸ್. ವಿಠ್ಠಲ್, ಉಪಾಧ್ಯಕ್ಷ ಆನಂದ್‌ರಾವ್, ಗೌರವಾಧ್ಯಕ್ಷ ಜ್ಞಾನದೇವ್ ಬೊಂಗಾಳೆ, ಮಾಜಿ ಅಧ್ಯಕ್ಷ ಕೆ.ಬಿ. ಶಂಕರನಾರಾಯಣ್, ಸಹಕಾರ್ಯದರ್ಶಿ ರಾಕುಂಡೆ, ಪ್ರೊ. ಪರಶುರಾಮ್ ಬೊಂಗಾಳೆ, ಪರಶುರಾಮ್ ಹೋವಳೆ ಕಂಚಿಕೆರೆ ಇವರುಗಳು ಅವಿನಾಶ್‌ರಾವ್ ಅವರಿಗೆ ಪುಷ್ಪ ಗುಚ್ಛ ನೀಡಿ ಸನ್ಮಾನಿಸಿದರು.

## ಎನ್‌ಎಸ್‌ಯುಐ ಕಾರ್ಯಕರ್ತರ ಬಂಧನ ವಿರೋಧಿಸಿ ಇಂದು ಪ್ರತಿಭಟನೆ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಪಠ್ಯಪುಸ್ತಕ ಪರಿಷ್ಕರಣ ವಿರೋಧಿಸಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ನಿವಾಸದ ಮುಂಭಾಗ ಪ್ರತಿಭಟಿಸಿದ ಎನ್.ಎಸ್.ಯು.ಐ ಕಾರ್ಯಕರ್ತರನ್ನು ಬಂಧಿಸಿರುವ ಸರ್ಕಾರದ ನಿಲುವನ್ನು ವಿರೋಧಿಸಿ ಹಾಗೂ ತಕ್ಷಣವೇ ಅವರನ್ನು ಬಿಡುಗಡೆ ಮಾಡಲು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಎಚ್.ಬಿ ಮಂಜಪ್ಪ ನೇತೃತ್ವದಲ್ಲಿ ಇಂದು ಬೆಳಗ್ಗೆ 11.30 ಕ್ಕೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ನಂತರ ಡಿಡಿಪಿಐ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ ತಿಳಿಸಿದ್ದಾರೆ.

### ಓದುಗರ ಪತ್ರ

## ಕೆಎಸ್‌ಆರ್‌ಟಿಸಿ: 'ದಾವಣಗೆರೆ-ಶಿರಡಿ' ಪ್ಯಾಕೇಜ್ ಟೂರ್ ಬಸ್ ಓಡಿಸಿ..

ಮಾನ್ಯರೇ,

2017ರಲ್ಲಿ, ಕೆಎಸ್‌ಆರ್‌ಟಿಸಿ ಆರಂಭಿಸಿದ್ದ ಬೆಂಗಳೂರು-ತಿರುಪತಿ ಪ್ಯಾಕೇಜ್ ಟೂರ್ ಪ್ರಯತ್ನ ಯಶಸ್ವಿಯಾಗಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಇದೆ ಮಾದರಿಯಲ್ಲಿ ದಾವಣಗೆರೆ ವಿಭಾಗದಿಂದ 'ದಾವಣಗೆರೆ-ಶಿರಡಿ' ಪ್ಯಾಕೇಜ್ ಟೂರ್ ಬಸ್ಸನ್ನು ಓಡಿಸಬೇಕು ಎಂದು ನಮ್ಮ ದಾವಣಗೆರೆ ತಂಡ ಕೆಎಸ್‌ಆರ್‌ಟಿಸಿ ದಾವಣಗೆರೆ ವಿಭಾಗೀಯ ನಿಯಂತ್ರಣಾಧಿಕಾರಿಗಳಲ್ಲಿ ಮನವಿ ಮಾಡುತ್ತದೆ.

ಪ್ರತಿ ದಿನ ಸಂಜೆ 5 ಗಂಟೆಗೆ ದಾವಣಗೆರೆ ಇಂದ ಹೊರಟು ಮುಂದಿನ ದಿನ ಬೆಳಿಗ್ಗೆ 5 ಕ್ಕೆ ಶಿರಡಿ ತಲುಪಬೇಕು (ಐರಾವತ, ಅಂಬಾರಿ ಸ್ಲೀಪರ್ ಕ್ಲಾಸ್ ಬಸ್ ಓಡಿಸಬೇಕು) ಶಿರಡಿಯ ಹೋಟೆಲ್‌ನಲ್ಲಿ ಪ್ರೆಶ್ ಅಪ್, ಉಪಹಾರ, ದರ್ಶನ, ಊಟದ ವ್ಯವಸ್ಥೆಯನ್ನು ಪ್ಯಾಕೇಜ್ ಟೂರ್ ಒಳಗೊಂಡಿರಬೇಕು, ಮರುದಿನ ಸಂಜೆ 5 ಗಂಟೆಗೆ ಶಿರಡಿ ಬಿಟ್ಟು ಅದರ ಮರುದಿನ ಬೆಳಿಗ್ಗೆ 5ಕ್ಕೆ ದಾವಣಗೆರೆ ತಲುಪಬಹುದು.

**- ರೋಹಿತ್ ಎಸ್. ಜೈನ್, ರಾಮಚಂದ್ರ ಶೆಟ್ಟಿ**
'ಟೀಂ ನಮ್ಮ ದಾವಣಗೆರೆ'

## ಬಿ.ಜಿ. ಅಜಯ್ ಕುಮಾರ್ ಅವರಿಗೆ ನಾಳೆ ಅಭಿನಂದನಾ ಸಮಾರಂಭ



ದಾವಣಗೆರೆ, ಜೂ. 6- ಬಸವ ಕೇಂದ್ರ - ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಬಸವ ಜಯಂತ್ಯೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಬಿ.ಜಿ. ಅಜಯಕುಮಾರ್ ಅವರಿಗೆ ನಾಡಿದ್ದು ದಿನಾಂಕ 8 ರ ಬುಧವಾರ ಸಂಜೆ 5.30 ಕ್ಕೆ ನಗರದ ಶಿವಯೋಗಾಶ್ರಮದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿ.ಪಂ. ಮಾಜಿ ಸದಸ್ಯ ತೇಜಸ್ವಿ ಪಟೇಲ್, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಕಾಂಗ್ರೆಸ್ ಮುಖಂಡ ಬಿ.ಹೆಚ್. ವೀರಭದ್ರಪ್ಪ, ಕೆಎಸ್‌ಎಸ್ ಫೌಂಡೇಶನ್ ಅಧ್ಯಕ್ಷ ಹೆಚ್.ಕೆ. ಬಸವರಾಜ್, ಸಮಾಜ ಸೇವಕ ಡಾ. ಸಿ.ಆರ್. ನಸೀರ್ ಅಹಮದ್, ದುರ್ಗಾಂಬಿಕ ದೇವಸ್ಥಾನ ಸಮಿತಿ ಧರ್ಮದರ್ಶಿ ಗೌಡ್ರು ಚನ್ನಬಸಪ್ಪ, ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್, ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಶ್ರೀಮತಿ ಚೇತನ ಶಿವಕುಮಾರ್ ಭಾಗವಹಿಸಲಿದ್ದಾರೆ.

ಹೆಚ್.ವಿ. ಮಂಜುನಾಥಸ್ವಾಮಿ ಅಭಿನಂದನಾ ನುಡಿ ನುಡಿಯಲಿದ್ದು, ಎಂ. ಜಯಕುಮಾರ್, ಅಂದನೂರು ಮುಪ್ಪಣ್ಣ, ಕಣಕುಪ್ಪಿ ಮುರುಗೇಶಪ್ಪ, ಎಸ್. ಓಂಕಾರಪ್ಪ, ಅಗಡಿ ಮಹಾಂತೇಶ್, ಕೆ.ಬಿ. ಪರಮೇಶ್ವರಪ್ಪ, ಮರುಳಸಿದ್ಧಯ್ಯ, ಮಹಾದೇವಮ್ಮ, ವನಜಾ ಮಹಾಲಿಂಗಯ್ಯ, ವೀಣಾ ಮಂಜುನಾಥ್, ಶಶಿಧರ ಬಸಾಪುರ ಪಾಲ್ಗೊಳ್ಳಲಿದ್ದಾರೆ.

## ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಬೀಜ ಬಿತ್ತನೆ ಅಭಿಯಾನ

ದಾವಣಗೆರೆ, ಜೂ.6- ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅರಣ್ಯ ಇಲಾಖಾ ವತಿಯಿಂದ ಹಸಿರು ಕರ್ನಾಟಕ ಕಾರ್ಯಕ್ರಮದ ಭಾಗವಾಗಿ ದಾವಣಗೆರೆ ವಿಭಾಗದ ಎಲ್ಲಾ ಪ್ರಾದೇಶಿಕ ವಲಯಗಳಲ್ಲಿ ಇಂದಿನಿಂದ ಇದೇ ದಿನಾಂಕ 12 ರವರೆಗೆ ಬೀಜ ಬಿತ್ತನೆ ಅಭಿಯಾನ ಕಾರ್ಯಕ್ರಮವನ್ನು ಶಾಲಾ/ಕಾಲೇಜು ಮಕ್ಕಳೊಂದಿಗೆ ಸ್ಕೌಟ್ಸ್ ಅಂಡ್ ಗೈಡ್ಸ್ ಎನ್.ಸಿ.ಸಿ, ಎನ್.ಎಸ್.ಎಸ್ ವಿದ್ಯಾರ್ಥಿಗಳ ಸಹಭಾಗಿತ್ವದೊಂದಿಗೆ ನಡೆಯಲಿದೆ.

ಬೀಜ ಬಿತ್ತನೆ ಅಭಿಯಾನವನ್ನು ದಾವಣಗೆರೆ ಪ್ರಾದೇಶಿಕ ವಿಭಾಗದ ವಲಯಗಳಾದ ದಾವಣಗೆರೆ ವಲಯದಲ್ಲಿ 5 ಪ್ರದೇಶಗಳಲ್ಲಿ, ಜಗಳೂರು ವಲಯದಲ್ಲಿ 4 ಅರಣ್ಯ ಪ್ರದೇಶಗಳಲ್ಲಿ, ಹರಪನಹಳ್ಳಿ ವಲಯದಲ್ಲಿ 6, ಹೊನ್ನಾಳಿ ವಲಯದಲ್ಲಿ 8, ರಂಗಯ್ಯನ ದುರ್ಗ ವನ್ಯಜೀವಿ ವಲಯದಲ್ಲಿ 1 ವಿವಿಧ ಸ್ಥಳೀಯ ಜಾತಿಯ ಉತ್ತಮ ಗುಣಮಟ್ಟದ 2900 ಕೆ.ಜಿ ಯಷ್ಟು ಬೀಜ ಬಿತ್ತನೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

## ಸಂಶೋಧನೆಗೆ ಪ್ರೋತ್ಸಾಹ

**(1ನೇ ಪುಟದಿಂದ)** ಮೂಢ ನಂಬಿಕೆಗಳ ವಿರುದ್ಧ ಹೋರಾಡಿದವರು. ಮೂಢನಂಬಿಕೆ ಯಾವ ರೀತಿ ನಮ್ಮ ಬದುಕಿನ ದಾರಿ ತಪ್ಪಿಸಿದೆ ಎಂದು ನಿರೂಪಿಸಿದರು. 70 ರ ದಶಕಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತವಾಗಿದ್ದ ಭಾನಾಮತಿ ವಿರುದ್ಧ ದೊಡ್ಡ ದನಿಯಾಗಿ ಹೋರಾಟ ಮಾಡಿ, ಜನರಿಗೆ ಧೈರ್ಯ ತುಂಬಿ ರೈತರ, ಬಡವರ ಬದುಕಿನಲ್ಲಿ ನೆಮ್ಮದಿಯನ್ನು ತಂದುಕೊಟ್ಟವರು.

ಹಲವಾರು ವಿಚಾರಗಳಲ್ಲಿ ಅವರ ನಿಲುವುಗಳು ಅಂದಿನ ಸಮಾಜವನ್ನು ಮೂಢನಂಬಿಕೆಯಿಂದ ದೂರ ಮಾಡಿ ಕರ್ನಾಟವನ್ನು ವೈಜ್ಞಾನಿಕವಾಗಿ ಚಿಂತಿಸುವ ಸಮಾಜವನ್ನಾಗಿ ಪರಿವರ್ತನೆ ಮಾಡಿದ್ದು ನರಸಿಂಹಯ್ಯನವರು. ಕೇವಲ ಮಾತಿನಲ್ಲಿ ಅಲ್ಲದೆ, ಕೃತಿಯಲ್ಲಿಯೂ ಮಹಾನ್ ವ್ಯಕ್ತಿಯಾಗಿದ್ದರಿಂದ ಭವ್ಯವಾದ ವಿದ್ಯಾಮಂದಿರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾರೆ. ಇಲ್ಲಿ ವಿದ್ಯಾಭ್ಯಾಸ ಮಾಡುವವರೆಲ್ಲರೂ ಪುಣ್ಯಶಾಲಿಗಳು ಎಂದರು.

## ಗೋಪಗೊಂಡನಹಳ್ಳಿ : ಹೆಣ್ಣು ಶಿಶು ಪತ್ತೆ

ದಾವಣಗೆರೆ, ಜೂ.6- ಇದೇ ದಿನಾಂಕ 3 ರಂದು ಜಗಳೂರು ತಾಲ್ಲೂಕಿನ ಗೋಪಗೊಂಡನಹಳ್ಳಿಯ ಹೊರ ವಲಯದಲ್ಲಿರುವ ಶ್ರೀ ಚೌಡಮ್ಮ ಮಾತ್ಯೆಂಗಮ್ಮ ದೇವಸ್ಥಾನದ ಒಳಗಡೆ ಸುಮಾರು 5 ದಿನದ ನವಜಾತ ಹೆಣ್ಣು ಶಿಶುವನ್ನು ಬಿಟ್ಟು ಹೋಗಿದ್ದರಿಂದ ಮಗುವನ್ನು ಗ್ರಾಮಸ್ಥರು ರಕ್ಷಣೆ ಮಾಡಿರುವ ಮಾಹಿತಿ ನಮ್ಮ ಇಲಾಖೆಗೆ ತಲುಪಿದ ಕೂಡಲೇ ಶಿಶುವನ್ನು ರಕ್ಷಿಸಲಾಗಿದ್ದು ಶಿಶುವಿನ ಆರೋಗ್ಯ ಪ್ರಸ್ತುತ ಉತ್ತಮವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಶಿಶುವಿನ ಜೈವಿಕ ಪೋಷಕರು ಶಿಶುವನ್ನು ಪಡೆಯಲು ಶಿಶುವಿನ ಜನನಕ್ಕೆ ಸಂಬಂಧಿಸಿದ ಸೂಕ್ತವಾದ ದಾಖಲಾತಿಗಳೊಂದಿಗೆ ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜೆ.ಹೆಚ್. ಪಟೇಲ್ ಬಡಾವಣೆ ಶಾಮನೂರು. ದೂ.ಸಂ- 9591430013/8722358929 ಅಥವಾ ಸರ್ಕಾರಿ ವಿಶೇಷ ದತ್ತು ಸಂಸ್ಥೆ (ಅಮೂಲ್ಯ) (ಜಿ) ಲೋಕಿಕೆರೆ ರಸ್ತೆ, ಶ್ರೀರಾಮನಗರ, ದೂ.ಸಂ-7829215214 ದಾವಣಗೆರೆ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅವರು ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಜೂ. 6- ಕಲಾಕುಂಚ ದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಯಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಪಡೆದವ ರಿಂದ ಕರೆಯಲಾಗಿದ್ದ ಪ್ರತಿಭಾ ಪುರಸ್ಕಾರ ಅರ್ಜಿ ಸಲ್ಲಿಕೆಯ ಅವಧಿಯನ್ನು ಇದೇ ದಿನಾಂಕ 25 ರವರೆಗೆ ವಿಸ್ತರಿಸಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪ್ರಥಮ ಭಾಷೆ ಕನ್ನಡದಲ್ಲಿ 125 ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ 'ಕನ್ನಡ ಕೌಸ್ತುಭ', 625 ಕ್ಕೆ 600 ಅಂಕ ಪಡೆದವರಿಗೆ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದಿಂದ 'ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿಯನ್ನು, 125 ಕ್ಕೆ 120 ರಿಂದ 124 ಅಂಕ ಪಡೆದವರಿಗೆ ಜಿಲ್ಲಾ ಮಟ್ಟದಲ್ಲಿ ' ಕನ್ನಡ ಕುವರ-ಕುವರಿ' ಪ್ರಶಸ್ತಿ ನೀಡಲಾಗುತ್ತದೆ.

ದಾವಣಗೆರೆ ಜಿಲ್ಲೆ ಹೊರತುಪಡಿಸಿ ಹೊರ ಜಿಲ್ಲೆಯವರು 95387-32777 ವ್ಯಾಟ್ಸಪ್‌ಗೆ ಸಂಪರ್ಕಿಸಿ, ಪಿಡಿಎಫ್ ನಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ, ಕನ್ನಡ ಗುಡಿ, ಕಾವೇರಿ ಅಪಾರ್ಟ್‌ಮೆಂಟ್, ಕುಂದುವಾಡ ರಸ್ತೆ, ಮಹಾಲಕ್ಷ್ಮೀ ಬಡಾವಣೆ, ದಾವಣಗೆರೆ-577006 ಗೆ ಕಳಿಸಬಹುದು.

ದಾವಣಗೆರೆ ಜಿಲ್ಲೆಯವರು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಡೋರ್ ನಂ. 588, 'ಕನ್ನಡ ಕೃಪ' ಮೊದಲನೇ ಮಹಡಿ, ಕುವೆಂಪು ರಸ್ತೆ (ಲಾಯರ್ ರೋಡ್), ಕಸ್ತೂರಬಾ ಬಡಾವಣೆ, ದಾವಣಗೆರೆ- 577002 ಈ ವಿಳಾಸಕ್ಕೆ ನೇರವಾಗಿ ತಲುಪಿಸಬಹುದು.

ವಿವರಕ್ಕೆ ಸಂಪರ್ಕಿಸಿ : 9513189196.

# ಕಠಿಣ ಪರಿಶ್ರಮ, ಸರಳತೆಯಿಂದ ಅಸಾಧ್ಯವಾದುದನ್ನು ಸಾಧಿಸಬಹುದು

### ಯುಪಿಎಸ್‌ಸಿ ಪರೀಕ್ಷೆಯಲ್ಲಿನ ರ್‍ಯಾಂಕ್ ವಿಜೇತ ಅವಿನಾಶ್ ಪ್ರತಿಪಾದನೆ



ದಾವಣಗೆರೆ, ಜೂ. 6- ನನ್ನ ಈ ಸಾಧನೆಗೆ ಕುಟುಂಬದವರ ಪ್ರೋತ್ಸಾಹ, ಮಾರ್ಗದರ್ಶನದ ಜೊತೆಗೆ ಕಠಿಣ ಪರಿಶ್ರಮ, ನಿರಂತರ ಪ್ರಯತ್ನ, ಬದ್ಧತೆ ಹಾಗೂ ಸರಳತೆಯಿಂದ ಮಾತ್ರ ಅಸಾಧ್ಯವಾದುದನ್ನು ಸಾಧಿಸಬಹುದು ಎಂದು ಯುಪಿಎಸ್‌ಸಿ 2021ರ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ 31ನೇ ರ್‍ಯಾಂಕ್ ಹಾಗೂ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಹೆಮ್ಮೆಯ ಕನ್ನಡಿಗ, ಯುವ ಪ್ರತಿಭೆ ಅವಿನಾಶ್ ವಿ. ರಾವ್ ಅವರು ವಿದ್ಯಾರ್ಥಿಗಳಿಗೆ ಪ್ರೇರಣೆಯ ಮಾತುಗಳನ್ನಾಡಿದರು.

ನಗರದ ಶಿಕ್ಷಣ ಸಮೂಹ ಸಂಸ್ಥೆ ಕಬ್ಬೂರು ಎಜುಕೇಷನ್ ಸೊಸೈಟಿ, ವಿನ್ನರ್ಸ್ ಸಮೂಹ ಸಂಸ್ಥೆಯಿಂದ ಏರ್ಪಡಿಸಿದ್ದ ಸಾಧಕರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉತ್ತಮ ಗ್ರಂಥಾಲಯ ಆರಂಭಿಸುವುದಾಗಿ ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವ್ಯಂಗ್ಯ ಚಿತ್ರಕಾರ ಮಂಜುನಾಥ್ ಹೆಚ್.ಬಿ. ಮಾತನಾಡಿ, ಬುದ್ಧಿವಂತಿಕೆಯ ಜೊತೆಗೆ ಸಾಧನೆಗೆ ಕೆಲವು ಕೌಶಲ್ಯಗಳನ್ನು ಬೆಳೆಸಿಕೊಂಡರೆ ಸಾಧನೆ ಖಚಿತ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಹೆಚ್. ದೊಡ್ಡಗೌಡರ್ ಮಾತನಾಡಿ, ಸಾಧನೆಗೆ ಯಾವುದೇ ಕ್ಷೇತ್ರ ಅಡ್ಡಿಯಾಗದು. ಸಾಧಿಸುವ ಛಲ ಇದ್ದರೆ ಯಾವುದೇ ಕ್ಷೇತ್ರದಲ್ಲಾದರೂ ಸಾಧಿಸಬಹುದು ಎಂದರು ಹೇಳಿದರು.

ನಿವೃತ್ತ ಉದ್ಯೋಗಾಧಿಕಾರಿ ರಾಮಚಂದ್ರ ರಾವ್ ಸ್ವಾಗತಿಸಿದರು. ವಿನ್ನರ್ಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ. ಶಿವರಾಜ್ ಕಬ್ಬೂರ್, ಅವಿನಾಶ್ ಅವರ ಸಾಧನೆ ಶ್ಲಾಘಿಸಿ, ಮುಂಬರುವ ವಿದ್ಯಾರ್ಥಿಗಳಿಗೆ ಇವರು ಆದರ್ಶಪ್ರಾಯರಾಗಲಿ ಎಂದು ಆಶಿಸಿದರು.

## ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು



ಹೊನ್ನಾಳಿ, ಜೂ. 6- ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಅವರಿಗೆ ಉತ್ತಮ ಶಿಕ್ಷಣ ನೀಡಿ, ಸಮಾಜದ ಸತ್ಪ್ರಜೆಗಳನ್ನಾಗಿಸುವ ಮೂಲಕ ತಮ್ಮ ಮಕ್ಕಳನ್ನೇ ಆಸ್ತಿಯನ್ನಾಗಿಸಬೇಕು ಎಂದು ತಾಲೂಕಿನ ಅರಕೆರೆ ಗ್ರಾಮದ ಶ್ರೀ ರಂಗನಾಥ ಚಾರಿಟೆಬಲ್ ಟ್ರಸ್ಟ್‌ನ ಕಾರ್ಯದರ್ಶಿ ಎ.ಬಿ. ಹನುಮಂತಪ್ಪ ಹೇಳಿದರು.

ತಾಲೂಕಿನ ಅರಕೆರೆ ಗ್ರಾಮದ ಜ್ಞಾನದೀಪ ವಿದ್ಯಾ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶಾಲಾ ದಾಖಲಾತಿ ಆಂದೋಲನ ಉದ್ಘಾಟಿಸಿ ಅವರು ಮಾತನಾಡಿದರು.

ಮಗುವಿಗೆ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗುಣಾತ್ಮಕ ಶಿಕ್ಷಣ ದೊರಕಿಸಲು ಅರಕೆರೆ ಗ್ರಾಮದ ಶ್ರೀ ರಂಗನಾಥ ಚಾರಿಟೆಬಲ್ ಟ್ರಸ್ಟ್ ಶ್ರಮಿಸುತ್ತಿದೆ. ಶಾಲೆಗೆ ಮಕ್ಕಳನ್ನು ದಾಖಲಿಸುವ ಮೂಲಕ ಪೋಷಕರು ಸದುಪಯೋಗಪಡಿಸಿ ಕೊಳ್ಳಬೇಕು ಎಂದು ತಿಳಿಸಿದರು.

ವಿದ್ಯಾ ಸಂಸ್ಥೆಯ ಮುಖ್ಯ ಶಿಕ್ಷಕಿ ನಗೀನಬಾನು, ಶಿಕ್ಷಕರಾದ ಕಾಂತರಾಜ್, ವೇದಾವತಿ, ಶ್ವೇತಾ, ಎಸ್.ಎಸ್. ಪುಷ್ಪಲತಾ, ಶಾಂತಕುಮಾರಿ, ಸಹಾಯಕಿ ಕರಿಬಸಮ್ಮ, ಪೋಷಕರಾದ ಎಸ್.ಜಿ. ಹರೀಶ್, ಭಾಗ್ಯ, ಜಿ.ಕೆ. ಹರೀಶ್, ವಿದ್ಯಾರ್ಥಿಗಳಾದ ಉಲ್ಲಾಸ್, ಸುಪ್ರೀತ್‌ಗೌಡ, ನವೀನ್‌ಕುಮಾರ್ ಇದ್ದರು.

ಸಂಸ್ಥೆಯ ವತಿಯಿಂದ ಭಾನುವಾರ ಮಾಸಡಿ, ತರಗನಹಳ್ಳಿ, ಸಿಂಗಟಗೆರೆ ಗ್ರಾಮಗಳಲ್ಲೂ ಶಾಲಾ ದಾಖಲಾತಿ ಆಂದೋಲನ ನಡೆಯಿತು. ಶಿಕ್ಷಕರು ಮನೆ-ಮನೆಗೆ ತೆರಳಿ ಮಕ್ಕಳನ್ನು ಶಾಲೆಗೆ ದಾಖಲಿಸುವಂತೆ ಪೋಷಕರ ಮನವೊಲಿಸಿದರು.

## ಕಷ್ಟದಿಂದ ಪಾರು ಮಾಡುವುದೇ ಧರ್ಮ



ದಾವಣಗೆರೆ, ಜೂ. 6- ಒಂದು ಕಾಲದಲ್ಲಿ ಧರ್ಮ ಎಂಬುದು ಕಬ್ಬಿಣದ ಕಡಲೆಯಂತ್ತಿತ್ತು. ಅಂತಹ ಸಂದರ್ಭದಲ್ಲಿ ಜನಸಾಮಾನ್ಯರಿಗೂ ಅದರ ಅನುಸರಣೆ ಸುಲಭವಾಗುವಂತೆ ಮಾಡಿದವರು ಬಸವಣ್ಣ ನವರು. ಯಾವುದು ನಮ್ಮನ್ನು ಕಷ್ಟದಿಂದ ಪಾರು ಮಾಡುತ್ತದೆಯೋ ಅದೇ ಧರ್ಮ ಎಂದು ಕುರ್ಕಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಗಣೇಶಾಚಾರ್ ತಿಳಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ನಡೆದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಶ್ರೀಮತಿ ಕಮಲಮ್ಮ ಮತ್ತು ಬಿ. ವಾಮದೇವಪ್ಪ ಇವರು ಸ್ಥಾಪಿಸಿದ ಹಿರೇತೊಗಲೇರಿ ಶ್ರೀಮತಿ ಗಂಗಮ್ಮ ಬಸಾಪುರದ ಬಸಪ್ಪ ಸ್ಮರಣಾರ್ಥ ದತ್ತಿ ಕಾರ್ಯಕ್ರಮದಲ್ಲಿ ವಚನ ಸಾಹಿತ್ಯದ್ಲಲಿ ಮೌಲ್ಯಗಳು ಎನ್ನುವ ವಿಷಯ ಕುರಿತು ಉಪನ್ಯಾಸ ನೀಡಿದರು.

ಬಸವಣ್ಣನವರ ಸರಳ ವಚನಗಳನ್ನು ಪಾಲಿಸುವುದರ ಮೂಲಕ ನಮ್ಮ ಜೀವನವನ್ನು ಹಸನು ಮಾಡಿಕೊಳ್ಳಬೇಕು ಎಂದು ಕರೆಕೊಟ್ಟರು. ಮುಂದುವರೆದು ಮಾತನಾಡುತ್ತಾ ಮೌಲ್ಯ ಎಂದರೆ ಬೆಲೆಯುಳ್ಳದ್ದು. ಯಾವುದು ನಿರಂತರವಾದದ್ದು, ಸಾರ್ವಕಾಲಿಕವಾದದ್ದು ಅದೇ ಮೌಲ್ಯ. ಸತ್ಯ ಎಂಬುದು ಒಂದು ಮೌಲ್ಯ. ಆ ಸತ್ಯವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕಾಗಿದೆ ಎಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಮಲ್ಲೇಶಿ ಕಾರ್ಯಕ್ರಮ ಉದ್ಘಾಟಿಸಿದರು. ತೊಗಲೇರಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಹೆಚ್. ಅಂಜಿನಪ್ಪ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಲಕ್ಕಮ್ಮ ಪ್ರಾಸ್ತಾವಿಕ ನುಡಿದರು. ಶಿಕ್ಷಕ ನಾಗರಾಜ್ ಸ್ವಾಗತಿಸಿದರು. ಜೆ. ಗುರುಸಿದ್ದಪ್ಪ ನಿರೂಪಿಸಿದರು. ಸಿ.ಜಿ. ಜಗದೀಶ್ ಕೂಲಂಬಿ ವಂದಿಸಿದರು.

# ಸಾಮಾಜಿಕ ನ್ಯಾಯ ಕಲ್ಪಿಸಿದ್ದು ದೇವರಾಜ ಅರಸು




ದಾವಣಗೆರೆ, ಜೂ.6- ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರ 40ನೇ ಪುಣ್ಯಸ್ಮರಣೆಯನ್ನು ಜಿಲ್ಲಾ ಕಾಂಗ್ರೆಸ್ ಕಛೇರಿ ಶಾಮನೂರು ಶಿವಶಂಕರಪ್ಪ ಸಭಾಭವನದಲ್ಲಿ ಸರಳವಾಗಿ ಇಂದು ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, 8 ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರು 'ಸಮಪಾಲು ಸಮಬಾಳು' ತತ್ವದಡಿ ಆಡಳಿತ ನಡೆಸಿ ಎಲ್ಲಾ ವರ್ಗದ ಜನತೆಗೆ ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತಂದರು ಎಂದು ಸ್ಮರಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್ ಮಾತನಾಡಿ, ದೇವರಾಜ ಅರಸು ಅವರು 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ಸಾಮಾಜಿಕ ನ್ಯಾಯವನ್ನು ಮುಂದುವರೆಸಿಕೊಂಡು ಹೋದ ಮಹನೀಯರು. ಅವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಜೀತ ಪದ್ಧತಿ, ಉಳುವವನೆ ಭೂಮಿ ಒಡೆಯ ಎಂಬ ಕ್ರಾಂತಿ ಕಾರಿಕ ಮಸೂದೆಯನ್ನು ಜಾರಿ ಮಾಡಿದ್ದರು. ತಮ್ಮ ಜಮೀನನ್ನು ಸಹ ಹೂಳುವವನಿಗೆ ನೀಡುವ ಮೂಲಕ ಮಾದರಿಯಾಗಿದ್ದರು. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಮಾತನಾಡಿ, 'ಉಳುವವನೆ ಭೂಮಿ ಒಡೆಯ' ಎಂಬ ಕ್ರಾಂತಿಕಾರಕ ಮಸೂದೆಯನ್ನು ಜಾರಿ ಮಾಡುವ ಮೂಲಕ ಈ ರಾಜ್ಯದ ಗೇಣಿದಾರರ ವಿರೋಧ ಕಟ್ಟಿಕೊಂಡರೂ ಸಹ ಬಡವರ ಪರವಾಗಿ ನಿಂತ ಧೀಮಂತ ವ್ಯಕ್ತಿ ಅರಸು ಅವರು ಎಂದರು.

ಕಾಂಗ್ರೆಸ್ ಜಿಲ್ಲಾ ಘಟಕದ ಅಬ್ದುಲ್ ಘನಿ ತಾಹೀರ್ ಮಾತನಾಡಿ, ಶೋಷಿತ ಸಮುದಾಯಕ್ಕೆ ನ್ಯಾಯ ಕಲ್ಪಿಸಿದ ಮೊದಲ ಮುಖ್ಯಮಂತ್ರಿ ಎಂದರೆ ಅದು ದೇವ ರಾಜ ಅರಸು ಅವರು ತಮ್ಮ ಆಡಳಿತಾವಧಿಯಲ್ಲಿ ಸಾಗುವಳಿದಾರರಿಗೆ ಜಮೀನು ನೀಡುವಂತಹ ಮಹತ್ವಾಕಾಂಕ್ಷೆ ಯೋಜನೆಯನ್ನು ಜಾರಿಗೆ ತಂದರು ಎಂದು ತಿಳಿಸಿದರು.

ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾ ಸಂಚಾಲಕ ರಾಘವೇಂದ್ರ ಗೌಡ ಮಾತನಾಡಿ, ದೇವರಾಜ ಅರಸು ಅವರು ತಮ್ಮ ಅಧಿಕಾರದಲ್ಲಿ ಪರಿಸರಕ್ಕೂ ಮಾನ್ಯತೆ ನೀಡಿ ಕೈಗಾರಿಕೋದ್ಯಮಿಗಳ ವಿರೋಧ ನಡುವೆಯೂ ವೃಕ್ಷ ರಕ್ಷಣಾ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಇಂದು ಕರ್ನಾಟಕ ರಾಜ್ಯ ಪರಿಸರ ಸ್ನೇಹಿಯಿಂದ ಕೂಡಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಹರೀಶ್, ಆವರೆಗೆರೆ ಮಂಜುನಾಥ್, ಯುವರಾಜ್, ಮೇಘರಾಜ್ ಮತ್ತಿತರರಿದ್ದರು.

## ರಾಣೇಬೆನ್ನೂರಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಜೂ. 6- 220 ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ರಾಣೇಬೆನ್ನೂರು ನಗರದ ಹಾಗೂ ಎಲ್ಲಾ 11 ಕೆವಿ ಮಾರ್ಗ ಹಾಗೂ 33 ಕೆವಿ ಆರ್‌ಎಸ್‌ಎನ್‌ಜಿ ಹಾಗೂ 33 ಕೆವಿ ಗುಡಗೂರು, ಮೈದೂರ ಮಾರ್ಗಗಳಲ್ಲಿ ನಾಡಿದ್ದು ದಿನಾಂಕ 8 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ
ಜನ್ಮದಿನದ ಶುಭಾಶಯಗಳು



ಶ್ರೀ ವಿಶ್ವನಾಥ್ ಎಸ್.ಆರ್
ನಿರ್ದೇಶಕರು



ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.
ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.

# ಮದ್ಯವರ್ಜನೆ ಶಿಬಿರದಿಂದ ಆರೋಗ್ಯಕರ ಜೀವನ ಸಾಧ್ಯ

## ಎಲೆಬೇತೂರಿನಲ್ಲಿ ವಿಶ್ವ ಪರಿಸರ ಜಾಗೃತಿ, ತಂಬಾಕು ವಿರೋಧಿ ದಿನಾಚರಣೆಯಲ್ಲಿ ಗೌಡ್ರ ಚನ್ನಬಸಪ್ಪ



ದಾವಣಗೆರೆ, ಜೂ. 6- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಹತ್ತು ಹಲವಾರು ಕಾರ್ಯಕ್ರಮಗಳಿವೆ. ಈ ಕಾರ್ಯಕ್ರಮದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಹಾಗೂ ವಿಶ್ವ ಪರಿಸರ ಜಾಗೃತಿ ಮಾಹಿತಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಶ್ರೀ ವೀರೇಂದ್ರ ಹೆಗ್ಗಡೆಯವರು ಮದ್ಯವರ್ಜನೆ ಶಿಬಿರ ಪ್ರಾರಂಭಿಸಿ ಜನರನ್ನು ದುಶ್ಚಟದಿಂದ ಮುಕ್ತರಾಗಲು ಅವಕಾಶ ಕಲ್ಪಿಸಿದರು. ಇದರಿಂದ ಹಲವಾರು ಕುಟುಂಬಗಳು ಸುಖಕರ ಮತ್ತು ಆರೋಗ್ಯಕರ ಜೀವನವನ್ನು ನಡೆಸುತ್ತಿದ್ದಾರೆ ಎಂದು ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಟ್ರಸ್ಟಿ ಗೌಡ್ರು ಚನ್ನಬಸಪ್ಪ ತಿಳಿಸಿದರು.

ಸಮೀಪದ ಎಲೆಬೇತೂರಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆ ಎಲೆಬೇತೂರು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಇವುಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಶಿಬಿರ ಹಾಗೂ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಆರೋಗ್ಯ ಇಲಾಖೆ, ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್ ಮಾತನಾಡಿ, ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ದೈಹಿಕ ಆರೋಗ್ಯ, ಗ್ಯಾಂಗ್ರಿನ್, ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳಿಂದಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ತಿಳಿಸಿದರು.

ವರ್ತಕ ಎಸ್.ಟಿ. ಕುಸುಮ ಶೆಟ್ಟಿ ಮಾತನಾಡಿ, ಪರಿಸರ ರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆ. ನೀಡಿರುವ ಗಿಡಗಳನ್ನು ಜೋಪಾನವಾಗಿ ಬೆಳೆಸಬೇಕು ನಾವೆಲ್ಲರೂ ಶುದ್ಧ ಗಾಳಿ ಪಡೆಯಬೇಕಾದರೆ ಪ್ರತಿ ಮನೆಯಲ್ಲೂ ಒಂದೊಂದು ಗಿಡವನ್ನು ಬೆಳೆಸಬೇಕು ಮತ್ತು ಪ್ರತಿಯೊಬ್ಬ ವ್ಯಕ್ತಿಯೂ ಆರೋಗ್ಯವಾಗಿ ಇರಬೇಕಾದರೆ ಗಾಳಿ ಅತಿ ಮುಖ್ಯ ಎಂದು ಪರಿಸರದ ಬಗ್ಗೆ ಮಾಹಿತಿ ತಿಳಿಸಿದರು .

ಪ್ರೌಢಶಾಲೆಯ ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷ ಎಂ. ಬಸವರಾಜಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಅಧ್ಯಕ್ಷರಾದ ಸುಮಾ ಬಿ.ವಿರೂಪಾಕ್ಷಪ್ಪ ಹಾಗೂ ಜಿ.ಪಂ ಮಾಜಿ ಸದಸ್ಯೆ ಶ್ರೀಮತಿ ರೇಣುಕಾ ಬಿ.ಕರಿಬಸಪ್ಪ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷ ಹೆಚ್. ಬಸವರಾಜಪ್ಪ ಪೊಲೀಸ್ ಸಂಚಾರಿ ಇನ್ಸ್‌ಪೆಕ್ಟರ್ ನಾಗರಾಜ್, ನವಜಾಗೃತಿ ವೇದಿಕೆಯ ಸಂಚಾಲಕ ಅಣಬೇರು ಮಂಜಣ್ಣ, ತಾ.ಪಂ. ಮಾಜಿ ಸದಸ್ಯ ಬಿ.ಜಿ. ಸಂಗನಗೌಡ, ತರಳಬಾಳು ಶಾಲೆಯ ಮುಖ್ಯ ಶಿಕ್ಷಕಿ ಬಿ.ಎಂ. ಶಶಿಕಲಾ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶ್ರೀಮತಿ ರೂಪ, ದೇವರಾಜ್, ಶ್ರೀನಿವಾಸ್ ಮತ್ತು ಇತರರು ಉಪಸ್ಥಿತರಿದ್ದರು.

ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಸ್.ಕೆ. ಹಲಗಣ್ಣನವರ ಸ್ವಾಗತಿಸಿದರು. ರೂಪಾ ವಂದಿಸಿದರು. ಕನ್ನಡ ಶಿಕ್ಷಕ ಎಸ್.ಆರ್. ನಾಗರಾಜ್ ನಿರೂಪಿಸಿದರು

ಈ ಸಂದರ್ಭದಲ್ಲಿ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ಭಿತ್ತಿ ಚಿತ್ರಗಳನ್ನು ಪ್ರದರ್ಶನ ಮಾಡಿದರು. ಕೊನೆಯಲ್ಲಿ ಶಾಲಾ ಆವರಣದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ನೆಡಲಾಯಿತು.

# ಮುಂದಿನ ಪೀಳಿಗೆಗಾಗಿ ಪರಿಸರ ರಕ್ಷಿಸಿ

## ಹರಿಹರ: ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ರಾಮಪ್ಪ



ಹರಿಹರ, ಜೂ.6- ನಮ್ಮ ಮುಂದಿನ ಪೀಳಿಗೆಯ ಜೀವನ ಆರೋಗ್ಯಕರವಾಗಿ ಸಾಗಬೇಕಾದರೆ ಪರಿಸರ ಉಳಿಸುವುದರ ಜೊತೆಗೆ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಿದಾಗ ಮಾತ್ರ ಮುಂದಿನ ಪೀಳಿಗೆಗೆ ಸಹಕಾರಿ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿ ನೆಟ್ಟು ಅವರು ಮಾತನಾಡಿದರು.

ಸಾರ್ವಜನಿಕರು ಹೆಚ್ಚು ಗಿಡಗಳನ್ನು ನೆಟ್ಟರೆ ವಾತಾವರಣ ತಂಪಾಗಿ ಇರುತ್ತದೆ. ಮನುಷ್ಯನು ಸಹ ಆರೋಗ್ಯವಂತನಾಗಿ ಹೆಚ್ಚು ವರ್ಷಗಳ ಕಾಲ ಬದುಕುವುದಕ್ಕೆ ಸಹಕಾರಿ ಆಗುತ್ತದೆ ಎಂದ ಅವರು, ಅರಣ್ಯ ಇಲಾಖೆಯವರು ಪರಿಸರ ದಿನಾಚರಣೆ ದಿನದಂದು ಗಿಡಗಳನ್ನು ನೆಡುವುದು ಒಂದು ದಿನಕ್ಕೆ ಸೀಮಿತವಾಗದೇ, ಸಾರ್ವಜನಿಕರಿಗೆ ನಿರಂತರವಾಗಿ ಸಸಿಗಳನ್ನು ಸರಬರಾಜು ಮಾಡಬೇಕು. ಇದರಿಂದಾಗಿ ಪ್ರಕೃತಿಯು ಹಸಿರೀಕರಣವಾಗುತ್ತದೆ. ಜನರಲ್ಲಿ ಅರಿವು ಬರುವುದಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಮಾತನಾಡಿ, ಇರುವುದು ಒಂದು ಭೂಮಿ ಅದನ್ನು ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಇಂದು ನಾವು ಪ್ರಕೃತಿಯ ಮೇಲೆ ದಬ್ಬಾಳಿಕೆ ಮಾಡಲು ಮುಂದಾದರೆ ಅದರಿಂದಾಗುವ ದುಷ್ಪರಿಣಾಮ ಬಹಳ ಭೀಕರವಾಗಿರುತ್ತದೆ. ಇದರಿಂದಾಗಿ ಮುಂದಿನ ಪೀಳಿಗೆಯನ್ನು ದುಸ್ತರ ಸ್ಥಿತಿಗೆ ತೆಗೆದುಕೊಂಡು ಹೋಗುತ್ತದೆ. ನಮ್ಮ ಈಗಿನ ಸುತ್ತಮುತ್ತಲಿನ ಹಸಿರು ಕನಿಷ್ಠ ಶೇ. 33 ರಷ್ಟು ಇರಬೇಕು. ಆದರೆ ಶೇ. 12.1 ರಷ್ಟು ಮಾತ್ರವೇ ಇರುವುದರಿಂದ ಇನ್ನೂ ದೊಡ್ಡ ಮಟ್ಟದಲ್ಲಿ ಜನರಲ್ಲಿ ಅರಿವು ಮೂಡಬೇಕಾಗಿದೆ. ಜನರು ತಾವು ಯಾವುದೇ ಹಣ್ಣನ್ನು ಸೇವಿಸಿದಾಗ ಅದರಲ್ಲಿ ಬರುವ ಬೀಜಗಳನ್ನು ಎಲ್ಲೆಂದರಲ್ಲಿ ಎಸೆಯುವುದರ ಬದಲಿಗೆ ತೋಟ, ಹೊಲದಲ್ಲಿ ಹಾಕಿದರೆ ಅದು ಮುಂದಿನ ದಿನಗಳಲ್ಲಿ ಹೆಮ್ಮರವಾಗಿ ಬೆಳೆದು ಫಲವನ್ನು ಕೊಡುತ್ತದೆ. ಜೊತೆಗೆ ಪ್ಲಾಸ್ಟಿಕ್ ಬಳಕೆ ಬಹಳ ಕಡಿಮೆ ಮಾಡಿ ಪರಿಸರ ಉಳಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ವಿರೂಪಾಕ್ಷಪ್ಪ, ಅರಣ್ಯ ಇಲಾಖೆಯ ಶ್ವೇತಾ, ಚಿದಾನಂದ, ಕಾಲೇಜು ಸಲಹಾ ಸಮಿತಿಯ ಸದಸ್ಯ ಅನ್ವರ್‌ಪಾಷಾ, ಮಂಜುನಾಥ್, ವಿಶ್ವನಾಥ್ ಹಾಗು ಇತರರು ಹಾಜರಿದ್ದರು.

# ಹೊನ್ನಾಳಿ-ನ್ಯಾಮತಿ ಅಭಿವೃದ್ಧಿಗೆ ಕಟಿಬದ್ಧ



### ಶಾಸಕ ರೇಣುಕಾಚಾರ್ಯ

ನ್ಯಾಮತಿ, ಜೂ.6- ಅವಳಿ ತಾಲ್ಲೂಕಿನ ಅಭಿವೃದ್ಧಿಗೆ ಕಟಿ ಬದ್ದನಾಗಿದ್ದು, ನನ್ನ ಶಕ್ತಿ ಮೀರಿ ಅವಳಿ ತಾಲ್ಲೂಕಿನ ಸೇವಕನಾಗಿ, ಮನೆ ಮಗನಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲೂಕಿನ ಬಸವನಹಳ್ಳಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಧೂಳು ಮುಕ್ತ ಅವಳಿ ತಾಲ್ಲೂಕುಗಳನ್ನಾಗಿ ಮಾಡಿದ್ದು, ರಾಜ್ಯದಲ್ಲೇ ಅವಳಿ ತಾಲ್ಲೂಕುಗಳನ್ನು ಮಾದರಿ ತಾಲ್ಲೂಕು ಮಾಡಬೇಕೆಂದು ಪಣ ತೊಟ್ಟಿದ್ದೇನೆಂದರು.

ಗ್ರಾ.ಪಂ. ಉಳಿತಾಯದ ಹಣದಲ್ಲಿ ಸುಂದರವಾದ ಗ್ರಾಮ ಪಂಚಾಯಿತಿ ಕಟ್ಟಡವನ್ನು ನಿರ್ಮಾಣ ಮಾಡಿದ್ದು, ಗ್ರಾ.ಪಂ. ಸದಸ್ಯರು ಮನಸು ಮಾಡಿದರೇ ಏನು ಬೇಕಾದರೂ ಸಾಧಿಸ ಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದರು.

ಈಗಾಗಲೇ ಈ ಭಾಗದ ಕೆರೆಗಳನ್ನು ತುಂಬಿಸುವ 518 ಕೋಟಿ ರೂ.ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಈ ಭಾಗದ ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ಹರಿಯಲಿದೆ. ಈ ಭಾಗದ ಜನರ ನೀರಾವರಿ ಮಾಡುವ ಕನಸು ನನಸಾಗುತ್ತಿದೆ ಎಂದು ಹೇಳಿದರು.

ಬಸವನಹಳ್ಳಿ ಗ್ರಾಮಸ್ಥರು ಪಶು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಕೇಳಿದ್ದು, ನಾನು ಸುಳ್ಳು ಹೇಳುವ ವ್ಯಕ್ತಿ ಅಲ್ಲ, ಈಗಾಗಲೇ ಗೋವಿನಕೋವಿಗೆ ಪಶು ಆಸ್ಪತ್ರೆ ಮಂಜೂರು ಮಾಡಿಸಿದ್ದು ಮುಂದಿನ ದಿನಗಳಲ್ಲಿ ಪಶು ಆಸ್ಪತ್ರೆ ಮಾಡಿಸುತ್ತೇನೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ್ ಮಾತನಾಡಿ, ಅವಳಿ ತಾಲ್ಲೂಕಿನಲ್ಲಿ ರೇಣುಕಾಚಾರ್ಯ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ನಿಮ್ಮಗಳ ಆಶೀರ್ವಾದ ಅವರ ಮೇಲೆ ಇರಲಿ ಎಂದರು.

ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್, ಗ್ರಾ.ಪಂ.ಅಧ್ಯಕ್ಷ ರತ್ನಾ ರಮೇಶ್, ಉಪಾಧ್ಯಕ್ಷೆ ಚಂದ್ರಮ್ಮ ಯೋಗೇಶಪ್ಪ, ಸದಸ್ಯರಾದ ರಾಜಶೇಖರ್, ಹಳದಮ್ಮ ಸಿಂಗಪ್ಪ, ಟಿ ಹರೀಶ್, ಕೆಂಚಪ್ಪ, ರುದ್ರಪ್ಪ, ಸುಜಾತ ರೇಣುಕಪ್ಪ, ಗೀತಾಕುಮಾರ್, ಅಶ್ವಿನಿ ನಾಗರಾಜ್, ಡಿಸಿ ಮಹಂತೇಶ್ ಬೀಳಗಿ, ಎಸ್ಪಿ ರಿಷ್ಯಂತ್, ಸಿಇಓ ಚನ್ನಪ್ಪ, ಇಓ ರಾಮಭೋವಿ, ತಹಶೀಲ್ದಾರ್ ರಶ್ಮಿ ರೇಣುಕಾ, ಪಿಡಿಓ ಚಿನ್ನಯ್ಯ ಸೇರಿದಂತೆ ಮತ್ತಿತರರಿದ್ದರು.

# ಜಿಗಳಿ, ಬೇವಿನಹಳ್ಳಿ, ಹಾಲಿವಾಣದಲ್ಲಿ ಪರಿಸರ ದಿನ



### ಸಾರ್ವಜನಿಕರಿಗೆ 500 ಗಿಡಗಳ ವಿತರಣೆ

ಮಲೇಬೆನ್ನೂರು, ಜೂ. 6- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಗಳಿ, ಜಿ. ಬೇವಿನಹಳ್ಳಿ ಮತ್ತು ಹಾಲಿವಾಣ ಗ್ರಾಮಗಳಲ್ಲಿ ಸ್ಥಳೀಯ ಗ್ರಾ.ಪಂ. ಸಹಯೋಗದೊಂದಿಗೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.


ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ 500 ಗಿಡಗಳನ್ನು ವಿತರಿಸಲಾಯಿತು.


ಮೂರು ಕಡೆ ನಡೆದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು, ನಮ್ಮ ನಾಳೆಯ ಉತ್ತಮ ವಾತಾವರಣಕ್ಕಾಗಿ ಪರಿಸರ ಬಹಳ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ನಾವೆಲ್ಲರೂ ಪರಿಸರದ ಬಗ್ಗೆ ಕಾಳಜಿ ವಹಿಸಿ, ಸಂರಕ್ಷಣೆ, ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು.

ಸಸಿ ನೆಟ್ಟರೆ ಸಾಲದು, ಅವುಗಳನ್ನು ನಮ್ಮ ಮನೆಯ ಮಕ್ಕಳಂತೆ ಬೆಳೆಸಬೇಕೆಂದು ದೇವಾಡಿಗ ಮನವಿ ಮಾಡಿದರು.

ಜಿಗಳಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಣುಕಮ್ಮ ಮಡಿವಾಳರ ರಂಗಪ್ಪ, ಉಪಾಧ್ಯಕ್ಷ ಡಿ.ಎಂ. ಹರೀಶ್, ಸದಸ್ಯರಾದ ಶ್ರೀಮತಿ ಕರಿಯಮ್ಮ, ಶ್ರೀಮತಿ ವಿನೋದಮ್ಮ ಹಾಲೇಶಪ್ಪ, ಎಂ.ಎಸ್. ಮಲ್ಲನಗೌಡ, ಜಿ. ಬೇವಿನಹಳ್ಳಿಯ ದೇವರಾಜ್, ಶ್ರೀಮತಿ ರೂಪಾ ಸೋಮಶೇಖರ್, ಪಿಡಿಓ ಉಮೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಪತ್ರಕರ್ತ ಪ್ರಕಾಶ್, ಪೂಜಾರ್ ನಾಗರಾಜ್, ಬೆಣ್ಣೇರ ನಂದ್ಯಪ್ಪ, ಗ್ರಾ.ಪಂ. ಕಾರ್ಯದರ್ಶಿ ಶೇಖರ್‌ನಾಯ್ಕ, ಬಿಲ್ ಕಲೆಕ್ಟರ್ ಬಿ. ಮೌನೇಶ್, ಧರ್ಮಸ್ಥಳ ಯೋಜನೆಯ ಕೃಷಿ ಅಧಿಕಾರಿ ಗಂಗಾಧರ್, ಆಂತರಿಕ ಲೆಕ್ಕ ಪರಿಶೋಧಕ ಚಿದಂಬರ, ವಲಯ ಮೇಲ್ವಿಚಾರಕಿ ಪದ್ಮಾವತಿ, ಸೇವಾ ಪ್ರತಿನಿಧಿಗಳಾದ ಮಮತಾ, ನಾಗರತ್ನ, ಒಕ್ಕೂಟದ ಅಧ್ಯಕ್ಷ ರುದ್ರೇಗೌಡ, ಹಾಲಿವಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಗ್ರಾ.ಪಂ. ಸದಸ್ಯರಾದ ಪಿ.ಕೆ. ಮೋಹನ್, ಎಸ್.ಜಿ. ಮಂಜುನಾಥ್, ಎಸ್.ಇ. ಹಾಲೇಶ್, ಡಿ.ಡಿ. ಚಿಕ್ಕಣ್ಣ, ಕಬ್ಬಾರ ಚಂದ್ರಪ್ಪ, ವಿಶಾಲಮ್ಮ, ದೀಪಾ ಮತ್ತು ಎಸ್‌ಡಿಎಂಸಿ ಅಧ್ಯಕ್ಷ ಶಿವಕ್ಕ ಆಂಜನೇಯ, ಯೋಜನಾಧಿಕಾರಿ ವಸಂತ್ ದೇವಾಡಿಗ, ವಲಯ ಮೇಲ್ವಿಚಾರಕಿ ಸವಿತಾ, ಕೃಷಿ ಅಧಿಕಾರಿ ಗಂಗಾಧರ್,ಗ್ರಾ.ಪಂ. ಪಿಡಿಓ ಕೆ.ಎಸ್. ರಮೇಶ್ ಮತ್ತಿತರರು ಭಾಗವಹಿಸಿದ್ದರು.

# ಹಳೆಬೇರು, ಹೊಸ ಚಿಗುರು 'ಗುಲ್ ಮೊಹರ್'





ಶಿವರಾತ್ರಿಯ ನಂತರ ಸೂರ್ಯನ ಪ್ರಖರತೆ ಹೆಚ್ಚಾಗಿತ್ತು.. ಆಗ ಎಲ್ಲೆಲ್ಲೂ ಬಿಸಿಲೇ...ಬಿಸಿಲು. ಸ್ಮಾರ್ಟ್ ಸಿಟಿ ಎಂದೆನಿಸಿಕೊಳ್ಳಲು ದಾಪುಗಾಲು ಹಾಕುತ್ತಿರುವ ನಮ್ಮ ದಾವಣಗೆರೆಯಲ್ಲಿ ಅಲ್ಲಲ್ಲಿ ಸಾಲು ಮರಗಳ ನೆರಳಿನ ಮೂಲಕ ಸಾಗೋಣ ಎಂದು ಚರ್ಚ್ ರೋಡ್ ಹಾಗೂ ಮೋದಿ ರಸ್ತೆಯ ಬಳಿ ಸ್ಕೂಟರ್ ತಿರುವು ಪಡೆಯಲು ಮುಂದಾದಾಗ ಆಶ್ಚರ್ಯ ಕಾದಿತ್ತು. ಬೃಹತ್ತಾದ ಮರದ ಬೊಡ್ಡೆ ಚಿಗುರಿದ್ದು ನೋಡುತ್ತಿದ್ದಂತೆ ನಿಂತೇ ಬಿಟ್ಟೆ.... ಇದು ಯಾವ ಮರದ್ದು ಎಂದರೆ ಮುಂಗಾರಿನ ಆರಂಭ ಮೇ, ಜೂನ್ ತಿಂಗಳಲ್ಲಿ ತನ್ನ ಕೆಂಬಣ್ಣದ ಹೂವುಗಳಿಂದ ಆಕರ್ಷಿಸುವ ಗುಲ್ ಮೊಹರ್ ಮರದ್ದು.

ಹೌದು, ಎತ್ತರೆತ್ತರಕ್ಕೆ ಬೆಳೆಯುವುದರೊಂದಿಗೆ ಆಕರ್ಷಕ ಹೂವುಗಳೊಂದಿಗೆ ತನ್ನ ಬೇರುಗಳನ್ನು ಭೂಮಿಯ ಆಳದಲ್ಲಿ ಹೋಗಿದ್ದರಿಂದ... ತನ್ನ ಒಡಲಿಗೆ ತಾನೇ ಕೊಡಲಿಯ ಪೆಟ್ಟು ತಿನ್ನುವಂತಾಯ್ತು.

ರಸ್ತೆ, ಚರಂಡಿ ಸರಿಪಡಿಸಲು ರಸ್ತೆಯ ಪಕ್ಕದ ಗುಲ್ ಮೊಹರ್ ಮರ ಬುಡದಿಂದ ಕಡಿಯುವ ಬದಲು ಮೂರಡಿ ಬಿಟ್ಟು ಕಡಿದಿದ್ದಾರೆ. ಇದರಿಂದಾಗಿ 'ಹಳೇ ಬೇರು ಹೊಸ ಚಿಗುರು ಕೂಡಿರಲು ಗುಲ್ ಮೊಹರ್ ಹೂ ಬಿಟ್ಟಾಗ ಮರ ನೋಡಲು ಸೊಬಗು' ಅಲ್ಲವೇ...!

**- ರಘುನಾಥರಾವ್ ತಾಪ್ಸೆ**, ದಾವಣಗೆರೆ.

# ಪ್ರಧಾನಿ ಮೆಚ್ಚುಗೆಗೆ ಪಾತ್ರರಾದ ಪಾಲಿಕೆ ಸದಸ್ಯ ಪ್ರಸನ್ನಕುಮಾರ್



ದಾವಣಗೆರೆ, ಜೂ.6- ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 8 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಡೆಯುತ್ತಿರುವ 'ಸಂಪರ್ಕ್ ಸೇ ಸಮರ್ಥನ್' ಸೇವಾ ಅಭಿಯಾನದ ಸೇವಾ ಸ್ಟಾರ್ ಪಟ್ಟಿಯಲ್ಲಿ ನಗರ ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಆಯ್ಕೆಯಾಗಿದ್ದಾರೆ.

ನಿನ್ನೆ ಬಿಡುಗಡೆಯಾದ ಸೇವಾ ಸ್ಟಾರ್ ಪಟ್ಟಿಯಲ್ಲಿ 20 ಜನ ಆಯ್ಕೆಯಾಗಿದ್ದು, ಆಯ್ಕೆಯಾಗಿರುವ ಎಲ್ಲರನ್ನೂ ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ಟರ್ ಮೂಲಕ ಶುಭಾಶಯ ಕೋರಿದ್ದಾರೆ.

ಈ ಪಟ್ಟಿಯಲ್ಲಿ ಕರ್ನಾಟಕ ರಾಜ್ಯದಿಂದ ಪ್ರಸನ್ನಕುಮಾರ್ ಸೇವಾ ಸ್ಕೋರರ್ ಸ್ಥಾನ ಪಡೆದಿರುವುದು ಯುಬಿಡಿಟಿ ಕಾಲೇಜಿಗೂ, ಅಲ್ಯೂಮ್ನಿ ಫೋರಂ ಪದಾಧಿಕಾರಿಗಳಿಗೆ, ಹಳೆಯ ವಿದ್ಯಾರ್ಥಿಗಳಿಗೆ ಸಂತಸ ತಂದಿದೆ.

# ಸಂಗೀತ ಪರೀಕ್ಷೆ: ಗೌರಿ ನವೀನ್ ದ್ವಿತೀಯ



ದಾವಣಗೆರೆ, ಜೂ. 6- ಹಿಂದೂಸ್ಥಾನಿ ಜ್ಯೂನಿಯರ್ ಸಂಗೀತ ಪರೀಕ್ಷೆಯಲ್ಲಿ ನಗರದ ಶ್ರೀ ಕೃಷ್ಣ ಸಂಗೀತ ವಿದ್ಯಾಲಯದ ಪ್ರಾಂಶುಪಾಲರಾದ ಭೀಮಸೇನ್ ಆರ್. ಜೋಷಿ ಅವರ ಶಿಷ್ಯೆ ಕು. ಗೌರಿ ನವೀನ್ ಅವರು ಹಾಡುಗಾರಿಕೆಯಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ತರಳಬಾಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಗೌರಿ, ಬಾಪೂಜಿ ಎಂಬಿಎ ಕಾಲೇಜಿನ ಪ್ರಾಚಾರ್ಯ ನವೀನ್ ನಾಗರಾಜ್ ಹಾಗೂ ಶ್ರೀಮತಿ ಸಹನಾ ನವೀನ್ ದಂಪತಿ ಪುತ್ರಿ.


ಜನ್ಮ ದಿನದ ಶುಭಾಶಯಗಳು

ಶ್ರೀ ಪಿ.ಕೆ. ಧರಣೇಂದ್ರ ಪ್ರಸಾದ್



ಇಂದು 50ನೇ ವರ್ಷದ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ಇವರಿಗೆ ಜನ್ಮ ದಿನದ ಶುಭಾಶಯಗಳು ಭಗವಂತನು ಆಯುರಾರೋಗ್ಯ, ಐಶ್ವರ್ಯವನ್ನಿತ್ತು ಕಾಪಾಡಲಿ ಎಂದು ಹಾರೈಸುತ್ತೇವೆ.

ಶುಭ ಕೋರುವವರು :

ಶ್ರೀ ಮಹಾವೀರ್ ಯುವ ಮಂಚ್ ರಿ., ಮಹಾವೀರ ಸಂಘ ರಿ. ಮತ್ತು ಸ್ನೇಹ ವೃಂದ



WANTED RESIDENTIAL TEACHERS

Qualification : Graduation + B.Ed

Free Food and Accomodation will be provided.

Contact :

70220 04042, 70220 04109
99806 29965



Srishyla Educational Trust (R), Bheemasamudra

GM INSTITUTE OF TECHNOLOGY

GMIT Campus, P.B.Road, Davangere

Ph:08192-233345, 233377, 252777, 252560.

Required

Applications are Invited from the Eligible Candidates for the following Posts

| Name of the Post | Qualification, Experience & Eligibility |
| --- | --- |
| Physics Faculty | First Class Master's in Degree in Physics min 2 years of Experience at the Degree Level |
| Computer Science Faculty | First Class Master's in Degree in Computer Science / M.Tech in CS and Engg. with min 2 years of Experience at the Degree Level |
| Lab Instructors ECE/CSE/Physics /Pharmacy | Diploma / Degree in Relevant Branch with min 2 years of Experience. |
| Graphic Designer | Min 2 years of Experience as Graphic Designer |
| Farm Manager | Degree / Diploma in Horticulture with min 3 years of Experience |
| ಗ್ರಂಥಾಲಯ ಸಹಾಯಕರು | SSLC / PUC ಪಾಸದ ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ. |
| ಎಲೆಕ್ಟ್ರಿಷಿಯನ್ | ಡಿಪ್ಲೋಮೊ ಅಥವಾ ಐಟಿಐ ಎಲೆಕ್ಟ್ರಿಕಲ್ ಸೈನ್ಸ್‌ನಲ್ಲಿ 2 ಅಥವಾ 3 ವರ್ಷ ಅನುಭವವುಳ್ಳವರು ಬೇಕಾಗಿದ್ದಾರೆ. |
| ಡ್ರೈವರ್ಸ್ | ಕನಿಷ್ಠ 5 ವರ್ಷಗಳ ಅನುಭವವಿರುವ LMV ಹಾಗೂ HMV ಲೈಸೆನ್ಸ್ ಹೊಂದಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. |
| ಪ್ಲಂಬರ್ | ಕನಿಷ್ಠ 3 ವರ್ಷಗಳ ಅನುಭವವಿರುವ ಪ್ಲಂಬರ್‌ಗಳು ಬೇಕಾಗಿದ್ದಾರೆ. |
| ಕಾರ್‌ಪೆಂಟರ್ | ಕನಿಷ್ಠ 3 ವರ್ಷಗಳ ಅನುಭವವಿರುವ ಕಾರ್‌ಪೆಂಟರ್ ಬೇಕಾಗಿದ್ದಾರೆ. |

Send your Resume to E-mail: career@gmit.ac.in

Apply with all Details of your Qualification, Experience Photo & Aadhar Card within 10 days of this Publication


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte